## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 13-08-2022

### ಗಾಂಧಿಗಂಜ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ: 121/2022 ಕಲಂ 341, 353, 332, 504, 506 ಜೊತೆ 149 ಐ.ಪಿ.ಸಿ. :-

ದಿನಾಂಕ 12/08/2022 ರಮದು 11-00 ಗಂಟೆಗೆ ಬಸವರಾಜ ಸಿ.ಪಿ.ಸಿ. 1901 ಗಾಂಧಿಗಂಜ ಪೊಲೀಸ ಠಾಣೆ ರವರು ಠಾಣೆಗೆ ಬಂದು ದೂರು ಸಲ್ಲಿಸಿದ್ದು, ಅದರ ಸಾರಾಂಶವೆನಂದರೆ ದಿನಾಂಕ 11/08/2022 ರಂದು ಮಾನ್ಯರ ಆದೇಶದಂತೆ ಗಾಂಧಿಗಂಜ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುವ ಇ.ಆರ್.ಎಸ್.ಎಸ್. 112 ವಾಹನದ ಮೇಲೆ 20-00 ಗಂಟೆಗೆ ನಾನು ಕರ್ತವ್ಯದ ಮೇಲೆ ಹೋಗಿರುತ್ತೇನೆ, ಸದರಿ ವಾಹನದ ಮೇಲೆ ಮಾರ್ಕೆಟ ಪೊಲೀಸ ಠಾಣೆಯ ಸಿ.ಹೆಚ್.ಸಿ. 597 ಶ್ರೀ ಮಲ್ಲಿಕಾರ್ಜುನ ರವರು ಚಾಲಕ ಅಂತ ಕರ್ತವ್ಯ ನಿರ್ವಹಿಸುತ್ತಿದ್ದು, ನಾವಿಬ್ಬರೂ ಕೂಡಿ ಕೆ.ಎ-38 ಜಿ-549 ವಾಹನದಲ್ಲಿ ಕರ್ತವ್ಯ ನಿರ್ವಹಿಸುವಾಗ ರಾತ್ರಿ ಅಂದಾಜು 21-13 ಗಂಟೆಗೆ ಬೀದರ ಜಿಲ್ಲಾ ಪೊಲೀಸ ಕಂಟ್ರೋಲ್ ರೂಂದಿಂದ ಬೀದರ ಗಾಂಧಿಗಂಜ ಯಾರ್ಡದಲ್ಲಿರುವ ಆನಂದ ವೈನ್ಸ ಶಾಪ ಹತ್ತಿರ ಹುಡುಗರು ಗಲಾಟೆ ಮಾಡುತ್ತಿದ್ದಾರೆ ಅಂತ ನಮಗೆ ಮಾಹಿತಿ ಕೊಟ್ಟ ಮೇರೆಗೆ ನಾವು ಕೂಡಲೇ ಬೀದರ ಗಾಂಧಿಗಂಜ ಯಾರ್ಡದಲ್ಲಿರುವ ಆನಂದ ವೈನ್ಸ ಶಾಪ ಹತ್ತಿರ ಹೋದಾಗ ಅಲ್ಲಿ ನನಗೆ ಗೊತ್ತಿದ್ದ ವಿಕ್ಕಿ ತಂದೆ ಈಶ್ವರ ಬಬಲಾ ಸಾ: ವಿದ್ಯಾನಗರ ಕಾಲೋನಿ, ಬೀದರ ಹಾಗು ಇನ್ನು 5-6 ಹುಡುಗರು ಕೂಡಿ ಗಲಾಟೆ ಮಾಡುತ್ತಿದ್ದು ನಾನು ವಾಹನದಿಂದ ಕಳೆಗೆ ಇಳಿದು ಅವರೆಲ್ಲರಿಗೆ ಯಾಕೇ ಗಲಾಟೆ ಮಾಡುತ್ತಿದ್ದೀರಿ ಅಂತ ಕೇಳಿದಾಗ ಅವರೆಲ್ಲರೂ ನಾವು ಸರಾಯಿ ಕುಡಿದು ಮಜಾ ಮಾಡುತ್ತಿದ್ದೇವೆ, ನೀವು ಯಾಕೆ ಇಲ್ಲಿ ಬಂದಿರುತ್ತಿರಿ ಅಂತ ಜೋರಾಗಿ ಎಲ್ಲರು ಚಿರುತ್ತಾ, ಯಾರೂ 112 ಗೆ ಕರೆ ಮಾಡಿದ್ದಾರೆ ಅಂತ ಅನ್ನುತ್ತಾ ಅವರೆಲ್ಲರೂ ಕೂಡಿ ನನಗೆ ಅಕ್ರಮವಾಗಿ ತಡೆದು ನನ್ನ ಜೊತೆ ಜಿಂಝಾ ಮುಷ್ಠಿ ಮಾಡುತ್ತಿರುವಾಗ ಅದರಲ್ಲಿ ವಿಕ್ಕಿ ಬಬಲಾ ಈತನು ಅಲ್ಲೆ ಬಿದ್ದಿದ್ದ ಒಂದು ಕಲ್ಲು ತೆಗೆದುಕೊಂಡು ನನ್ನ ನಡು ತಲೆಯಲ್ಲಿ ಹೊಡೆದು ರಕ್ತಗಾಯ ಪಡಿಸಿದ್ದು, ಉಳಿದವೆಲ್ಲರೂ ಹೊಡೆಯಿರಿ, ಜೀವ ಸಹಿತ ಬಿಡಬೇಡಿ ಅಂತ ಚಿರಾಡುತ್ತಿದ್ದಾಗ ನಮ್ಮ ವಾಹನದ ಚಾಲಕರಾದ ಶ್ರೀ ಮಲ್ಲಿಕಾರ್ಜುನ ಸಿ.ಹೆಚ್.ಸಿ. 597 ರವರು ಬಂದು ಬಿಡಿಸಿಕೊಂಡಾಗ ಅವರೆಲ್ಲರೂ ಅಲ್ಲಿಂದ ಓಡಿ ಹೋಗಿರುತ್ತಾರೆ. ನಂತರ ನಾನು ಆನಂದ ವೈನ್ ಶಾಪ ಅಂಗಡಿಯ ಮ್ಯಾನೇಜರ ಬಾಬುರಾವ ಸಾ: ಖಾಶೆಂಪೂರ ಗ್ರಾಮ ರವರಿಗೆ ವಿಚಾರಿಸಲು ಅವರು ಓಡಿ ಹೋದ ಹುಡುಗರು 1) ವಿಕ್ಕಿ ತಂದೆ ಈಶ್ವರ ಬಬಲಾ 2) ಹರೀಶ @ ಹರ್ಷವರ್ಧನ ತಂದೆ ಮಾರುತಿ 3) ಅಭಿ @ ಅಭೀಷೇಕ ತಂದೆ ಮಾರುತಿ 4) ಮಿಥುನ ತಂದೆ ತುಕಾರಾಮ 5) ಪವನ ತಂದೆ ಕಲ್ಲಪ್ಪಾ 6) ರಾಹುಲ್ ತಂದೆ ರಾಜಕುಮಾರ 7) ಅಂಕುಶ ತಂದೆ ರಘುನಾಥ ಎಲ್ಲರೂ ಅಂಬೆಡ್ಕರ ಕಾಲೋನಿ ಬೀದರ ಇವರುಗಳು ಇರುತ್ತಾರೆಂದು ತಿಳಿಸಿ, ಇವರುಗಳು ನಮ್ಮ ವೈನ್ ಶಾಪ ಅಂಗಡಿಯಲ್ಲಿಯೇ ಸರಾಯಿ ಕುಡಿದು ನಮ್ಮ ಜೊತೆ ಗಲಾಟೆ ಮಾಡುವಾಗ ನಮ್ಮ ಮಾಲೀಕರಾದ ಶ್ರೀ ಮಾದಪ್ಪಾ ಪಿಳ್ಳೆ ರವರು ಇ.ಆರ್.ಎಸ್.ಎಸ್. 112 ವಾಹನಕ್ಕೆ ಕರೆ ಮಾಡಿದ್ದು ಇರುತ್ತದೆ ಎಂದು ತಿಳಿಸಿರುತ್ತಾರೆ. ಈ ಘಟನೆಯು ದಿನಾಂಕ 11/08/2022 ರಂದು ರಾತ್ರಿ ಅಂದಾಜು 21-30 ಗಂಟೆಗೆ ಆನಂದ ವೈನ್ಸಶಾಪ ಅಂಗಡಿಯ

ಮುಂದೆ ನಡೆದಿರುತ್ತೆದೆ. ನಂತರ ನಾನು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದು ನನ್ನ ಸರಕಾರಿ ಕರ್ತವ್ಯಕ್ಕೆ  ಅಡೆ ತಡೆ ಮಾಡಿ, ನನಗೆ ಅಕ್ರಮವಾಗಿ ತಡೆದು ಜಿಂಝೂಮುಷ್ಠಿ ಮಾಡಿ ಅವಾಚ್ಯವಾಗಿ ಬೈದು ಜೀವದ ಬೆದರಿಕೆ ಹಾಕಿ ಕಲ್ಲಿನಿಂದ ನನ್ನ ತಲೆಯಲ್ಲಿ ಹೊಡೆದು  ರಕ್ತಗಾಯ ಪಡಿಸಿದ ಈ ಮೇಲಿನ ಎಲ್ಲಾ ಜನರ ವಿರುದ್ಧ ಕಾನೂನು ಕ್ರಮ ಜರುಗಿಸಲು ಅಂತ ಕೊಟ್ಟ ದೂರಿನ ಸಾರಂಶದ ಮೇಲೆ ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಯಿತು.

**ಜನವಾಡಾ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ: 78/2022 ಕಲಂ 279, 337, 338 , 304(ಎ) ಐಪಿಸಿ :–**

ದಿನಾಂಕ 12/08/2022 ರಂದು ಬೆಳಿಗ್ಗೆ ನನಗೆ ಹಾಗೂ ಬಸ್ ಕಂಡಕ್ಟರ್ ಸತೀಷ ಬಿಲ್ಲೆ ಸಂಖ್ಯೆ 507 ರವರಿಗೆ ರೂಟ್ ನಂ 193/194 ರ ಕರ್ತವ್ಯಕ್ಕೆ ನೇಮಿಸಿ ಬಸ್ ಸಂಖ್ಯೆ ಕೆಎ–38/ಎಫ್–1251 ನೇದರಲ್ಲಿ 10:00 ಗಂಟೆಗೆ ಬೀದರನಿಂದ ಪ್ರಯಾಣಿಕರಿಗೆ ಕೂಡಿಸಿಕೊಂಡು 11:15 ಎಎಮ್ ಗಂಟೆಗೆ ಭಾಲ್ಕಿಗೆ ತಲುಪಿ ಅಲ್ಲಿ ಪ್ರಯಾಣಿಕರಿಗೆ ಬಿಟ್ಟು ಮತ್ತೆ ಭಾಲ್ಕಿಯಿಂದ ಬೀದರಗೆ ಬರಲು ಪ್ರಯಾಣಿಕರಿಗೆ ಕೂಡಿಸಿಕೊಂಡು 11:30 ಎ ಎಮ್ ಗಂಟೆಗೆ ಭಾಲ್ಕಿ ಬಸ್ ನಿಲ್ದಾಣದಿಂದ ಹೊರಟು ಬೀದರ ಕಡೆಗೆ ಬರುತ್ತಿದ್ದಾಗ ದಿನಾಂಕ 12/08/2022 ರಂದು ಅಂದಾಜು 12:15 ಗಂಟೆ ಸುಮಾರಿಗೆ ಬೀದರ ಭಾಲ್ಕಿ ರೋಡಿನ ಮೇಲೆ ಹೊನ್ನಿಕೇರಿ ಕ್ರಾಸ್ ಹತ್ತಿರ ಬಂದಾಗ ಅದೇ ವೇಳೆಯಲ್ಲಿ ಬೀದರ ಕಡೆಯಿಂದ ಅಂದರೆ ಎದುರಿನಿಂದ ಒಂದು ಸ್ವೀಫ್ಟ ಕಾರ ನಂಬರ ಟಿ ಎಸ್ 09/ಎಫ್ ಎ–3356 ನೇದರ ಚಾಲಕ ತನ್ನ ಕಾರನ್ನು ಅತಿವೇಗ ಹಾಗೂ ನಿರ್ಲಕ್ಷ್ಯತನದಿಂದ ಮಾನವ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ಚಲಾಯಿಸಿಕೊಂಡು ಬಂದು ನನ್ನ ಬಸ್ ಗೆ ಡಿಕ್ಕಿ ಹೊಡೆದಿರುತ್ತಾನೆ. ತಕ್ಷಣ ನಾನು ಹಾಗೂ ಬಸ್ ಕಂಡಕ್ಟರ್  ಸತೀಷ ಹಾಗೂ ಬಸ್ಸಿನಲ್ಲಿದ್ದ ಪ್ರಯಾಣಿಕರು ಮತ್ತು ಅಲ್ಲೇ ಹೊಗುತ್ತಿದ್ದ ಜನರಲ್ಲಿ ನೇತಾಜಿ ತಂದೆ ದೇವರಾಜ ಪಾಟೀಲ್ ಸಾ॥ ವಿಳಾಸಪೂರ ಮತ್ತು ಸಂಗಮೇಶ ತಂದೆ ಸಿದ್ರಾಮಪ್ಪಾ ಸಾ॥ ಮಳಚಾಪೂರ ಮತ್ತು ಇತರರು ಕೂಡಿ ಕಾರಿನಲ್ಲಿದ್ದ ಕಾರು ಚಲಾಯಿಸುತ್ತಿದ್ದ ವ್ಯಕ್ತಿಗೆ ನೋಡಲು ಎಡಗೈ, ಹಣೆಗೆ, ಎಡಗಾಲು ಮೊಣಕಾಲಿಗೆ  ರಕ್ತಗಾಯವಾಗಿದ್ದು, ಇವನಿಗೆ ವಿಚಾರಿಸಲು ತನ್ನ ಹೆಸರು ಮೊಮೀನ್ ಶಹಬಾಜ ತಂದೆ ಅಬ್ದುಲ್ ಸತ್ತಾರ ಸಾ॥ ಉದಗೀರ ಅಂತಾ ತಿಳಿಸಿರುತ್ತಾನೆ. ಅವನ ಪಕ್ಕದ ಸೀಟಿನ ಮೇಲೆ ಕುಳಿತ ವ್ಯಕ್ತಿಗೆ ನೋಡಲು ತಲೆಯಲ್ಲಿ ಮುಖಕ್ಕೆ ಸೊಂಟಕ್ಕೆ ಹತ್ತಿರ ಭಾರಿ ಗಾಯವಾಗಿ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾನೆ. ಇವನ ಹೇಸರು ವಿಚಾರಿಸಲು ಸೈಯದ್ ಇಕ್ಬಾಲ್ ಅಹಮದ್ ಹಾಸ್ಮಿ ವಯ॥ 60 ವರ್ಷ ಅಂತಾ ಇರುತ್ತಾನೆ. ಇವನ ಸೀಟಿನ ಹಿಂದಿನ ಸೀಟಿನ ಮೇಲೆ ಕುಳಿತ ವ್ಯಕ್ತಿಗೆ ನೋಡಲು ತಲೆಯಲ್ಲಿ ಹಣೆಯಲ್ಲಿ ಎದೇಯಲ್ಲಿ ಗಟಾಯಿಗೆ ಹಾಗೂ ಕಾಲಿಗೆ ಭಾರಿ ಗಾಯವಾಗಿ ಸ್ಥಳದಲ್ಲಿಯೇ ಮೃತಪಟ್ಟಿರತ್ತಾನೆ. ಈತನ ಹೆಸರು ಸೈಯದ್ ಮುಖಿಮ್ ಹಾಸ್ಮಿ ತಂದೆ ಸೈಯದ್ ಇಕ್ಬಾಲ್ ಅಹಮದ್ ಹಾಸ್ಮಿ ಅಂತಾ ಇರುತ್ತಾರೆ. ಹಾಗೂ ಇವನ ಪಕ್ಕದ ಸೀಟಿನ ಮೇಲೆ ಕುಮಾರಿ ಹುರೈನ್ ತಂದೆ ಉಬೇದ ಹಾಸ್ಮಿ ವಯ॥ 6 ವರ್ಷ ಹಾಗೂ ವಸಿ ತಂದೆ  ಉಬೇದ ಹಾಸ್ಮಿ ಅಂತಾ

ಇದ್ದು ಇವರಿಗೆ ಚಿಕ್ಕಪುಟ್ಟ ಗಾಯಗಳಾಗಿರುತ್ತವೆ. ಇಬ್ಬರ ಮೃತದೇಹ ಮತ್ತು ಗಾಯಾಳುಗಳನ್ನು ಘಟನಾ ಸ್ಥಳದಿಂದ ಅಂಬುಲೇನ್ಸ್ ನಲ್ಲಿ ಚಿಕಿತ್ಸೆ ಕುರಿತು ಆಸ್ಪತ್ರೆಗೆ ತೆಗೆದುಕೊಂಡು ಬಂದಿರುತ್ತೇವೆ. ಈ ಘಟನೆಯು ಕಾರಿನ ನಂ ಟಿ ಎಸ್ 09/ಎಫ್ ಎ–3356 ನೇದರ ಚಾಲಕ ಮೋಮಿನ್ ಶಹಾಬಾಜ ತಂದೆ ಅಬ್ದುಲ್ ಸತ್ತಾರ ಸಾ॥ ಉದಗೀರ ಈತನು ತನ್ನ ಕಾರನ್ನು ಅತಿವೇಗ ಹಾಗೂ ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ನನ್ನ ಬಸ್ಸಿಗೆ ಅಪಘಾತ ಮಾಡಿದ್ದರಿಂದ ಸಂಭವಿಸಿರುತ್ತದೆ. ಕಾರಣ ಸದರಿ ಕಾರ ಚಾಲಕನ ಸೂಕ್ತ ಕಾನೂನು ಕ್ರಮ ಜರುಗಿಸಲು ವಿನಂತಿ ಇರುತ್ತದೆ ಅಂತಾ ನೀಡಿದ ಹೇಳಿಕೆ ಕೊಟ್ಟ ಮೇರೆಗೆ ಪ್ರಕರಣ ದಾಖಲಿಸಿ ತನಿಖೆ ಕೈಕೊಲ್ಳಲಾಯಿತು.

**ಜನವಾಡಾ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ: 79/2022 ಕಲಂ 279, 337, 338 ಐಪಿಸಿ :–**

ದಿನಾಂಕ: 12/08/2022 ರಂದು 1330 ಗಂಟೆಗೆ ಬೀದರ ಸರಕಾರಿ ಆಸ್ಪತ್ರೆಯಿಂದ ರಸ್ತೆ ಅಪಘಾತದ ಬಗ್ಗೆ ಎಮ್.ಎಲ್.ಸಿ ಮಾಹಿತಿ ತಿಳಿಸಿದ ಕೂಡಲೇ ಬೀದರ ಸರಕಾರಿ ಆಸ್ಪತ್ರೆಗೆ ಭೇಟಿಕೊಟ್ಟು ಗಾಯಾಳು ಶ್ರೀಮತಿ ರಿಹಾನಾ ಗಂಡ ಸಮದಮಿಯ್ಯಾ ಮುಲ್ಲಾವಾಲೆ ಸಾ: ಚಾಂಬೋಳ ಗ್ರಾಮ ರವರಿಗೆ ವಿಚಾರಿಸಿದ್ದು ಸದರಿಯವರು ತಮ್ಮ ಹೇಳಿಕೆ ದೂರು ನೀಡಿದ್ದು ಸಾರಾಂಶವೇನೆಂದರೆ, ನಾನು ಕೂಲಿಕೆಲಸ ಮಾಡಿಕೊಂಡಿರುತ್ತೇನೆ. ನನಗೆ ಎರಡು ದಿವಸಗಳಿಂದ ಜ್ವರ ಬರುತ್ತಿದ್ದು ಕಡಿಮೆ ಆಗಿರುವುದಿಲ್ಲ. ಹೀಗಿರುವಾಗ ದಿನಾಂಕ: 12/08/2022 ರಂದು ಬೆಳಿಗ್ಗೆ ಚಿಕಿತ್ಸೆಗಾಗಿ ಬೀದರದ ಖಾಸಗಿ ಆಸ್ಪತ್ರೆಗೆ ಹೋಗುವ ಸಲುವಾಗಿ ನನ್ನ ಗಂಡ ಸಮದಮಿಯ್ಯಾ ಇವರು ನನಗೆ ಟಿವಿಎಸ್ ಎಕ್ಸೆಲ್ ಮೊಪೆಡ್ ಮೋಟಾರ ಸೈಕಲ್ ನಂ. ಕೆಎ–38 ಎಲ್–6808 ನೇದ್ದರ ಮೇಲೆ ಕೂಡಿಸಿಕೊಂಡು ನಮ್ಮೂರಿನಿಂದ ಬೀದರ ಕಡೆಗೆ ಹೋಗುತ್ತಿದ್ದಾಗ ನಮ್ಮೂರ ರಾಜು ತಂದೆ ಯೆಶೆಪ್ಪಾ ಇವನು ತನ್ನ ಆಟೋ ನಂ. ಕೆಎ–38/ 6623 ಅತೀ ವೇಗ ಹಾಗು ನಿಷ್ಕಾಳಜೀತನದಿಂದ ಚಲಾಯಿಸಿಕೊಂಡು ಬಂದು ಬೆಳಿಗ್ಗೆ 11 ಗಂಟೆ ಸುಮಾರಿಗೆ ನಮ್ಮೂರ ಲುಂಬಿಣಿ ನಗರ ಕ್ರಾಸ್ ಹತ್ತಿರ ನಮಗೆ ಡಿಕ್ಕಿ ಹೊಡೆದಿರುತ್ತಾನೆ. ಈ ಅಪಘಾತದಿಂದ ನನ್ನ ಎಡಕಾಲಿನ ಪಿಂಡರಿ ಕೆಳಭಾಗದಲ್ಲಿ ಭಾರೀ ರಕ್ತಗಾಯ ಆಗಿದ್ದು, ತಲೆಗೆ ಗುಪ್ತಗಾಯ ಆಗಿರುತ್ತದೆ. ನನ್ನ ಗಂಡ ಸಮದಮಿಯ್ಯಾ ಇವರಿಗೆ ಎಡಕಾಲಿನ ಮೊಣಕಾಲಿಗೆ ತರಚಿದ ಗಾಯ ಆಗಿದ್ದು, ಸೊಂಟಕ್ಕೆ ಗುಪ್ತಗಾಯ ಆಗಿರುತ್ತದೆ. ಕೂಡಲೇ ಆಟೋ ಚಾಲಕ ರಾಜು ಇವನು ಆಟೋ ನಿಲ್ಲಿಸಿ ಬಂದು ನನಗೆ ಎಬ್ಬಿಸಿದ್ದು, ಅಷ್ಟರಲ್ಲಿ ಚರ್ಚ ಹತ್ತಿರ ನಿಂತುಕೊಂಡಿದ್ದ ನನ್ನ ಮೈದುನ ಅಹ್ಮದ ಇವರು ಓಡಿ ಬಂದಿದ್ದು, ನನಗೆ ಅದೇ ಆಟೋದಲ್ಲಿ ರಾಜು ಹಾಗು ನನ್ನ ಗಂಡ ಸಮದಮಿಯ್ಯಾ ಮತ್ತು ನನ್ನ ಮೈದುನ ಅಹ್ಮದ ರವರು ಬೀದರ ಸರಕಾರಿ ಆಸ್ಪತ್ರೆಗೆ ತಂದು ಸೇರಿಕ್ ಮಾಡಿರುತ್ತಾರೆ. ಕಾರಣ ಆಟೋ ಚಾಲಕ ರಾಜು ಇವನ ವಿರುದ್ದ ಕಾನೂನು ಕ್ರಮ ಜರುಗಿಸಲು ವಿನಂತಿ ಅಂತ ನೀಡಿದ ಹೇಳಿಕೆ ಮೇರೆಗೆ ಪ್ರಕರಣ ದಾಖಲಿಸಿ ತನಿಖೆ ಕೈಕೊಂಡೆನು.

**ಗಾಂಧಿಗಂಜ ಪೊಲೀಸ್ ಠಾಣೆ ಬೀದರ ಪ್ರಕರಣ ಸಂಖ್ಯೆ; 122/2022 ಕಲಂ 279, 338 ಐಪಿಸಿ ಜೊತೆ 187 ಐ.ಎಂ.ವಿ ಕಾಯ್ದೆ :-**

ದಿನಾಂಕ: 11-08-2022 ರಂದು ಗಾಯಳು ಶ್ರೀ ಪರಮೇಶ್ವರ ತಂದೆ ಜೈಲಸಿಂಗ್ ಜಾಧವ, ವಯಸ್ಸು: 22 ವರ್ಷ, ಜಾತಿ: ಲಂಬಾಣಿ, ಉದ್ಯೋಗ: ಟೇಕ್ನಿಶಿಯನ್ ಕೆಲಸ, ಸಾ: ರದ್ದೂರ ತಾಂಡಾ, ತಾ: ಭಾಲ್ಕಿ, ಜಿಲ್ಲಾ: ಬೀದರ ಇವರು ದಿನ ನಿತ್ಯದಂತೆ ಮನ್ನಳಿ ಸೋಲಾರ ಪ್ಲಾಂಟಿಗೆ ಹೋಗಿ ಕರ್ತವ್ಯ ಮುಗಿಸಿಕೊಂಡು ರಕ್ಷ ಬಂಧನ ಹಬ್ಬದ ಪ್ರಯುಕ್ತ ಮನ್ನಳ್ಳಿಯಿಂದ ನನ್ನ ಹೊಂಡಾ ಶೈನ್ ಮೋಟರ ಸೈಕಲ್ ನಂ. ಕೆಎ-39, ಎಸ್-6611 ನೇದ್ದರ ಮೇಲೆ ನೌಬಾದದಲ್ಲಿರುವ ನಮ್ಮ ಅಕ್ಕನ ಮನೆಗೆ ಬರುತ್ತಿರುವಾಗ ಅಂದಾಜು ಸಮಯ ಸಾಯಂಕಾಲ 5-45 ಗಂಟೆಗೆ ಅಮಲಾಪೂರ ಗ್ರಾಮದ ಬೀದರ ಕಡೆಗೆ ಇರುವ ಬ್ರಿಜ್ಡ್ ಹತ್ತಿರ ರೋಡಿನ ಮೇಲೆ ನಾನು ಬರುತ್ತಿರುವಾಗ ನನ್ನ ಎದುರಿನಿಂದ ಅಂದರೆ ಬೀದರ ಕಡೆಯಿಂದ ಒಂದ ಆಟೋವನ್ನು ನೇದ್ದರ ಚಾಲಕ ಅತೀ ವೇಗ ಹಾಗೂ ನಿಷ್ಕಾಳಜೀತನದಿಂದ ತನ್ನ ಆಟೋ ನಡೆಸಿಕೊಂಡು ಬಂದು ನನಗೆ ಡಿಕ್ಕಿ ಮಾಡಿ ಆಟೋ ನಿಲ್ಲಿಸದೇ ಆಟೋ ಸಮೇತ ಓಡಿ ಹೋಗುತ್ತಿರುವ ಸದರಿ ಆಟೋ ನಂಬರ್ ನಾನು ನೋಡಲು ಕೆಎ 38/9650 ಇರುತ್ತದೆ. ನನಗೆ ಬಲಕೈ ಸ್ಪೊಲ್ಡರ್ ಹತ್ತಿರ ತರಚಿದ ಭಾರಿ ಗುಪ್ತಗಾಯ, ಬಲ ಸೊಂಟಕ್ಕೆ ತರಚಿದ ರಕ್ತಗಾಯ ಮತ್ತು ಎಡ ಮೊಳಕಾಲಿಗೆ ಭಾರಿ ಗುಪ್ತಗಾಯವಾಗಿರುತ್ತದೆ. ನಾನು ತಂದೆಗೆ ಫೋನ್ ಮಾಡಿ ವಿಷಯ ತಿಳಿಸಿದ್ದು, ನನ್ನ ತಂದೆಯವರು ಬಂದು ನನಗೆ ಆಸ್ಪತ್ರೆಗೆ ತಂದು ಸೇರಿಕ ಮಾಡಿರುತ್ತಾರೆ. ಸದರಿ ಆಟೋ ಚಾಲಕನ ವಿರುದ್ದ ಕಾನೂನು ಕ್ರಮ ಜರುಗಿಸಲು ವಿನಂತಿ ಅಂತಾ ಹೇಳಿಕೆಯ ಸಾರಾಂಶದ ಮೇರೆಗೆ ಪ್ರಕರಣ ದಾಖಲಿಸಿ ತನಿಕೆ ಕೈಕೊಳ್ಳಲಾಯಿತು.

**ಭಾಲ್ಕಿ ನಗರ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ: 0130/2022 ಕಲಂ 279, 338 ಐಪಿಸಿ :-**

ದಿನಾಂಕ 12/08/2022 ರಂದು 1500 ಗಂಟೆಗೆ ಶ್ರೀ ಬಾಬುರಾವ ತಂದೆ ಕಲ್ಯಾಣರಾವ ಪಾಟೀಲ್ ಸಾ;ತಳವಾಡ (ಕೆ) ತಾ; ಭಾಲ್ಕಿ ಇವರು ಠಾಣೆಗೆ ಬಂದು ದೂರು ಅರ್ಜಿ ನೀಡಿದ್ದು ಇದನ್ನು ನಾನು ಸ್ವೀಕರಿಸಿಕೊಂಡು ನೋಡಲು ಸಾರಾಂಶವೇನೆಂದರೆ, ನಮ್ಮ ತಮ್ಮ ಸಂಜೀವಕುಮಾರ ವಯಸ್ಸು 45 ವರ್ಷ ಇವನು ಒಕ್ಕಲುತನ ಕೆಲಸ ಮಾಡಿಕೊಂಡು ಇರುತ್ತಾನೆ. ನಿನ್ನೆ ದಿನಾಂಕ 11/08/2022 ರಂದು ಮಧ್ಯಾನ ನಾನು ಮನೆಯಲ್ಲಿದ್ದಾಗ ನನ್ನ ತಮ್ಮ ಸಂಜೀವಕಮಾರ ಈತನು ನನಗೆ ತಿಳಿಸಿದ್ದೇನೆಂದರೆ, ಭಾಲ್ಕಿಯಲ್ಲಿ ನನ್ನ ಕೆಲಸ ಇದೆ ನಾನು ಮತ್ತು ನನ್ನ ಗೆಳಿಯನಾದ ಸತೀಷ ತಂದೆ ಬಾಬುರಾವ ರವರು ಕೆಲಸದ ನಿಮತ್ಯ ಭಾಲ್ಕಿಗೆ ಹೋಗಿ ಬರುತ್ತೇವೆ ಅಂತ ಹೇಳಿ ನನ್ನ ಮೋಟಾರ ಸೈಕಲ್ ನಂ. ಕೆಎ-38/ಕ್ಯೂ-3435 ಮೇಲೆ ಕುಳಿತು ಮೋಟಾರ ಸೈಕಲ್ ಸತೀಷ ಇವನು ಚಲಾಯಿಸುತ್ತಾ ನಮ್ಮೂರದಿಂದ ಭಾಲ್ಕಿಗೆ ಹೋದರು. ನಂತರ ಸಾಯಂಕಾಲ 4 ಗಂಟೆಯ ಸುಮಾರಿಗೆ ನಮ್ಮೂರ ಸತೀಷ ಇವರು ನನಗೆ ಫೋನ

ಮಾಡಿ ತಿಳಿಸಿದ್ದೇನೆಂದರೆ, ನಾನು ಮತ್ತು ನಿಮ್ಮ ತಮ್ಮ ಸಂಜೀವಕುಮಾರ ರವರು ಮೋಟಾರ ಸೈಕಲ್ ಮೇಲೆ ಕುಳಿತು ಮೋಟಾರ ಸೈಕಲ ನಾನು ಚಲಾಯಿಸುತ್ತಾ ಭಾಲ್ಕಿ ಬಸ್ ನಿಲ್ದಾಣ ದಿಂದ ಭಾಲ್ಕಿ ಎ.ಆರ್.ಟಿ.ಓ. ಕಛೇರಿಯ ಹಿಂದೆ ಇರುವ ಪ್ಲಾಟ ನೋಡಲು ಹೋಗುತ್ತಿರುವಾಗ ನಾನು ಮೋಟಾರ ಸೈಕಲ ಅತಿವೇಗ ಹಾಗೂ ನಿಷ್ಕಾಳಜಿನದಿಂದ ಚಲಾಯಿಸಿಕೊಂಡು ಹೋಗುವಾಗ ಭಾಲ್ಕಿ-ಹುಮನಾಬಾದ ರೋಡಿನ ಮೇಲೆ ಭಾಲ್ಕಿ ಭೊಮಗೊಂಡೇಶ್ವರ ಚೌಕ ಹತ್ತಿರ 3;45 ಪಿ.ಎಂ. ಗಂಟೆಯ ಸುಮಾರಿಗೆ ಒಮ್ಮೇಲೆ ಮೋಟಾರ ಸೈಕಲ ಮುಂದೆ ನಾಯಿ ಬಂದಿದ್ದರಿಂದ ನಾನು ಮೋಟಾರ ಸೈಕಲಗೆ ಒಮ್ಮೆಲೆ ಬ್ರೆಕ ಹಾಕಿದ್ದರಿಂದ ಮೋಟಾರ ಸೈಕಲ್ ಹಿಡಿತ ತಪ್ಪಿ ನಾವು ಇಬ್ಬರು ಮೋಟಾರ ಸೈಕಲ ಸಮೇತ ರೋಡಿನ ಮೇಲೆ ಬಿದಿದ್ದರಿಂದ ನನಗೆ ಸಣ್ಣಪುಟ್ಟ ಗಾಯಗಳು ಆಗಿದ್ದು ಮೋಟಾರ ಸೈಕಲ್ ಮೇಲೆ ಹಿಂದೆ ಕುಳಿತಿದ್ದ ನಿಮ್ಮ ತಮ್ಮ ಸಂಜೀವಕಮಾರ ಇವನಿಗೆ ತಲೆಯಲ್ಲಿ ಗುಪ್ತಗಾಯ, ಎಡಗೈ ಭುಜಕ್ಕೆ ಭಾರಿ ಗುಪ್ತಗಾಯ, ಎಡಗಾಲು ಮೋಳಕಾಲು ಹತ್ತಿರ ತರಚಿದ ಗಾಯಗಳು ಆಗಿರುತ್ತೇವೆ. ನಾನು ನನ್ನ ಗೆಳೆಯರಾದ ಸಿದ್ದಪ್ಪಾ ತಂದೆ ಶಿವರಾಜ ಮತ್ತು ಸಿದ್ದು ತಂದೆ ಶಾಂತಪ್ಪಾ ಪಾಟೀಲ್ ರವರಿಗೆ ಫೋನ ಮಾಡಿ ಕಾರ ತೆಗೆದುಕೊಂಡು ಬರಲು ತಿಳಿಸಿದ್ದು ಅವರು ಕಾರ ತೆಗೆದುಕೊಂಡು ಬಂದಿರುತ್ತಾರೆ.ನಾವು ಸಂಜೀವಕುಮಾರ ಇವನಿಗೆ ಚಿಕಿತ್ಸೆ ಕುರಿತು ನೇರವಾಗಿ ಬೀದರ ಅಪೇಕ್ಸ ಆಸ್ಪತ್ರೆಗೆ ಕರೆದುಕೊಂಡು ಬರುತಿದ್ದೇವೆ ನೀವು ಆಸ್ಪತ್ರೆ ಬರ್ರಿ ಅಂತ ತಿಳಿಸಿದ್ದರಿಂದ ನಾನು ಬೀದರ ಅಪೇಕ್ಸ ಆಸ್ಪತ್ರೆಗೆ ಹೋಗಿ ನೊಡಲು ಸತೀಷ ಹೇಳಿದಂತೆ ನನ್ನ ತಮ್ಮನಿಗೆ ಗಾಯಗಳು ಆಗಿದ್ದು ಇರುತ್ತವೆ. ಸತೀಷ ಇವನಿಗೆ ಆಸ್ಪತ್ರೆಯಲ್ಲಿ ತೋರಿಸುವಂತಹ ಗಾಯಗಳು ಆಗಿರುವುದಿಲ್ಲಾ ಆತನು ಆಸ್ಪತ್ರೆಯಲ್ಲಿ ತೋರಿಸಿಕೊಂಡಿರುವುದಿಲ್ಲಾ. ನಮ್ಮ ತಮ್ಮ ಸಂಜೀವಕುಮಾರ ಇವನಿಗೆ ಅಪಘಾತ ಪಡಿಸಿದ ಮೋಟಾರ ಸೈಕಲ್ ನಂ. ಕೆಎ-38/ಕ್ಯೂ-3435 ನೇದ್ದರ ಚಾಲಕ ಸತೀಷ ತಂದೆ ಬಾಬುರಾವ ಸೈದುನ ಗ್ರಾಮ ತಳವಾಡ (ಕೆ) ಇವನ ಮೇಲೆ ಕಾನೂನು ಕ್ರಮ ಕೈಗೊಳ್ಳಲು ವಿನಂತಿ ಇರುತ್ತದೆ ಅಂತ ಫಿರ್ಯಾದಿ ಸಲ್ಲಿಸಿದ ದೂರಿನ ಸಾರಾಂಶದ ಮೇರೆಗೆ ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಯಿತು.

**ಹುಲಸೂರ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ: 0051/2022 ಕಲಂ: 395 ಐಪಿಸಿ:-**

ದಿನಾಂಕ: 12/08/2022 ರಂದು 15:30 ಗಂಟೆಗೆ ಸರಕಾರಿ ಆಸ್ಪತ್ರೆ ಬಸವಕಲ್ಯಾಣದಿಂದ ಫೋನ್ ಮೂಲಕ ಎಮ್ಎಲ್ಸಿ ಮಾಹಿತಿ ಬಂದ ಮೇರೆಗೆ ನಾನು ಇಂದು 16:00 ಗಂಟೆಗೆ ಬಸವಕಲ್ಯಾಣ ಸರಕಾರಿ ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳು ನಾಗಪ್ಪಾ ತಂದೆ ರಾಮಣ್ಣ ಮಾನೆ ಸಾ॥ ಮಿರಖಲ್ ರವರಿಗೆ ವಿಚಾರಣೆ ಮಾಡಿ ಅವರ ಹೇಳಿಕೆ ಸಾರಂಶವೇನೆಂದರೆ ತಾನು ಈ ಮೇಲ್ಕಂಡ ವಿಳಾಸದವನಿದ್ದು ಕುರಿ ಸಾಕಾಣಿಕೆ ಮತ್ತು ಒಕ್ಕಲುತನ ಕೆಲಸ ಮಾಡಿಕೊಂಡಿರುತ್ತೇನೆ. ನಮ್ಮೂರ ಶಿವಾರದ ಮಿರಕಲ್-ಬೇಲೂರ ರಸ್ತೆಯ ಪಕ್ಕದಲ್ಲಿ ನನ್ನ ತಂದೆಯ ಹೆಸರಿನಲ್ಲಿ 1 ಎಕರೆ 8 ಗುಂಟೆ ಹೊಲ ಇರುತ್ತದೆ. ನಾನು ಸುಮಾರು ಒಂದು ತಿಂಗಳ ಹಿಂದೆ ಹೊಲದಲ್ಲಿ ತಗಡಿನ ಶೆಡ್ಡ ಹಾಕಿಕೊಂಡು ರಾತ್ರಿ ಅದರಲ್ಲಿಯೇ ಕುರಿಗಳು ಕೂಡಿ ಹಾಕಿ ದಿನಾಲೂ ರಾತ್ರಿ ನಾನು ಒಬ್ಬನೇ ಅಲ್ಲಿಯೇ

ಮಲಗುತ್ತೇನೆ. ನಮ್ಮ ಶಿವಾರದಲ್ಲಿ ಶೇಖ ಅಹ್ಮದ ಸವಾಲಾಕೆ ಸಾ: ಬಸವಕಲ್ಯಾಣ ರವರ ಹೊಲ ಇರುತ್ತದೆ. ಶೇಖ ಅಹ್ಮದ ರವರಿಗೆ 6 ಜನ ಮಕ್ಕಳಿದ್ದು ಅದರಲ್ಲಿ ಅಕ್ರಮ ತಂದೆ ಶೇಖ ಅಹ್ಮದ ಸವಾಲಾಕೆ ವಯಸ್ಸು-40 ವರ್ಷ ಈತನು ದಿನಾಂಕ: 10/08/2022 ರಂದು ಹೊಲಕ್ಕೆ ಮನೆಯವರ ಜೊತೆಯಲ್ಲಿ ಬಂದಾಗ ನಮ್ಮ ಶೆಡ್ಡಿನ ಹತ್ತಿರ ಬಂದು ನಮ್ಮ ಕುರಿಗಳು ನೋಡಿ ಹೋಗಿರುತ್ತಾನೆ. ಹೀಗಿರುವಾಗ ದಿನಾಂಕ 11/08/2022 ರಂದು ಮುಂಜಾನೆ 9-30 ಗಂಟೆಗೆ ಶೆಡ್ಡಿನಿಂದ ಕುರಿಗಳು ಹೊಡೆದುಕೊಂಡು ಮೇಯಿಸಲು ಹೋಗಿ ಸಾಯಂಕಾಲ 5-30 ಗಂಟೆಯ ಸುಮಾರಿಗೆ ಮರಳಿ ಕುರಿಗಳು ಹೊಡೆದುಕೊಂಡು ಬಂದು ನಮ್ಮ ಶೆಡ್ಡಿನಲ್ಲಿ ಕೂಡಿ ಹಾಕಿರುತ್ತೇನೆ. ನಂತರ ನಾನು ಮನೆಗೆ ಹೋಗಿ ಊಟ ಮಾಡಿಕೊಂಡು ಮರಳಿ ರಾತ್ರಿ 10-00 ಗಂಟೆಯ ಸುಮಾರಿಗೆ ಶೆಡ್ಡಿಗೆ ಬಂದು ಶೆಡ್ಡಿನ ಹೊರಗೆ ಪತ್ರಾದ ಕೆಳಗೆ ಮಲಗಿಕೊಂಡಿರುತ್ತೇನೆ. ದಿನಾಂಕ 12/08/2022 ರಂದು ರಾತ್ರಿ 1-00 ಗಂಟೆಯ ಸುಮಾರಿಗೆ ನಾಯಿಗಳು ಬೋಗಳುವ ಶಬ್ದ ಕೇಳಿ ನಾನು ಎದ್ದು ನೋಡಲು ನಮ್ಮ ಹೊಲದ ಪಕ್ಕದ ಅಕ್ರಮ ಶೇಖ ಅಹ್ಮದ ಸವಾಲಾಕೆ ಹಾಗು ಆತನ ಜೊತೆಯಲ್ಲಿ ಇನ್ನು 5 ಜನ ಅಪರಿಚಿತರು ನನ್ನ ಹತ್ತಿರ ಬಂದು, ಅದರಲ್ಲಿ ಅಕ್ರಮ ಈತನು ನನಗೆ ಇಲ್ಲಿ ಪೇಟ್ರೊಲ ಎಲ್ಲಿ ಸಿಗುತ್ತದೆ ಅಂತ  ನನಗೆ ಕೇಳಿದಾಗ ನಾನು ಮಿರಕಲ್ ಗ್ರಾಮಕ್ಕೆ ಹೋಗಿ ಅಲ್ಲಿ ಸಿಗುತ್ತದೆ ಅಂತ ಹೇಳಿದಾಗ  ಅಷ್ಟರಲ್ಲಿಯೇ ಒಬ್ಬ ವ್ಯಕ್ತಿ ನನಗೆ ಒತ್ತಿ ಹಿಡಿದು ಕೆಳಗೆ ಕೆಡವಿದನು, ಇನ್ನೊಬ್ಬ ನನ್ನ ಕಾಲು ಹಿಡಿದು ಎಳೆದು ಕೈಯಿಂದ ಹೊಟ್ಟೆಯಲ್ಲಿ ಹೊಡೆದು ಗುಪ್ತಗಾಯ ಪಡಿಸಿದನು. ಇನ್ನಿಬ್ಬರೂ ಕೂಡಿಕೊಂಡು ಕುರಿಗಳು ಕೂಡಿ ಹಾಕಿದ ಶೆಡ್ಡಿನ ಬಾಗಿಲು ತೆರೆದಿರುತ್ತಾರೆ. ಅಕ್ರಮ ಮತ್ತು ಇನ್ನು ಮೂರು ಜನರು ಕೂಡಿಕೊಂಡು ನನ್ನ ಕೈ ಕಾಲುಗಳು ಹಿಡಿದುಕೊಂಡು ಕುರಿಗಳು ಕೂಡಿ ಹಾಕಿದ ಶೆಡ್ಡಿನ ಒಳಗೆ ತೆಗೆದುಕೊಂಡು ಹೋಗಿ ನನ್ನ ಮಫಲೇರದಿಂದ ನನ್ನ ಕೈಗಳು ಕಟ್ಟಿ, ನನ್ನ ದೋತುರದಿಂದ ನನ್ನ ಎರಡು ಕಾಲುಗಳು ಕಟ್ಟಿ ಹಾಕಿ ಒಬ್ಬನು ಕಲ್ಲಿನಿಂದ ನನ್ನ ಬಲಗೈ ಹೆಬ್ಬೆರಳ ಮಧ್ಯದಲ್ಲಿ ಹೊಡೆದು ರಕ್ತಗಾಯ ಪಡಿಸಿ, ಚಿರಿದರೆ ನಿನಗೆ ಹೊಡೆದು ಹಾಕುತ್ತೇನೆಂದು ಬೆದರಿಸಿರುತ್ತಾನೆ. ನನ್ನ ಕಾಲು ಹಿಡಿದು ಎಳೆದಿರುವುದರಿಂದ ಬೆನ್ನಿನ ಮೇಲೆ ತರಚಿದ ಗಾಯಗಳು ಆಗಿರುತ್ತವೆ. ಉಳಿದವರು ನನ್ನ 35 ಕುರಿಗಳನ್ನು ಒಂದೊಂದಾಗಿ ಎತ್ತಿಕೊಂಡು ರೋಡಿನ ಹತ್ತಿರವಿದ್ದ ಮೋಟಾರ ವಾಹನದಲ್ಲಿ ಹಾಕಿಕೊಂಡು ಅಲ್ಲಿಂದ ಹೋಗಿರುತ್ತಾರೆ. ಮೋಟಾರ ವಾಹನ ಯಾವುದು ಇತ್ತು ಎನ್ನುವದು ನಾನು ನೋಡಿರುವುದಿಲ್ಲ. ಎಲ್ಲರೂ ಹಿಂದಿ ಮಾತನಾಡುತ್ತಿದ್ದು, ಅಂದಾಜು 35 ರಿಂದ 40 ವರ್ಷದ ವಯಸ್ಸಿನವರು ಇದ್ದು, ಎಲ್ಲರೂ ಪ್ಯಾಂಟ್ ಮತ್ತು ಶರ್ಟ ಹಾಕಿಕೊಂಡಿದ್ದರು. ಅವರು ಮೋಬೈಲ್ ಟಾರ್ಚ ಮತ್ತು ಬ್ಯಾಟರಿ ಬಳಸಿದ್ದು ಆ ಬೆಳಕಿನಲ್ಲಿಯೇ ನಾನು ಅವರಿಗೆ ನೋಡಿದ್ದು ಇರುತ್ತದೆ. ಅಕ್ರಮ ಈತನ ಜೊತೆಗೆ ಬಂದವರಿಗೆ ನೋಡಿದಲ್ಲಿ ನಾನು ಗುರುತಿಸುತ್ತೇನೆ. ನಂತರ ನಾನು ಪ್ರಯತ್ನಪಟ್ಟು ಕೈ ಕಾಲುಗಳು ಬಿಡಿಸಿಕೊಂಡು ಅಲ್ಲಿಂದ ನಮ್ಮ ಮನೆಗೆ ಹೋಗಿ ನನ್ನ ಹೆಂಡತಿಯಾದ ಸುಶೀಲಾಬಾಯಿ, ಮಗನಾದ ತಾನಾಜಿಗೆ ವಿಷಯ ತಿಳಿಸಿರುತ್ತೇನೆ.ನಂತರ ಎಲ್ಲರೂ ಕೂಡಿಕೊಂಡು ಶೆಡ್ಡಿನ ಹತ್ತಿರ ಬಂದಿರುತ್ತೇವೆ. ಅಲ್ಲಿಂದ ನನ್ನ ಮಗನಾದ ತಾನಾಜಿ ಹಾಗು ನಮ್ಮ ಅಣ್ಣನ ಮಕ್ಕಳಾದ ಮಾಧು ತಂದೆ ಯಲ್ಲಪ್ಪಾ ಮತ್ತು ಬಾಳು ತಂದೆ ಯಲ್ಲಪ್ಪಾ ರವರು ನನಗೆ ಚಿಕಿತ್ಸೆ ಕುರಿತು ಸರಕಾರಿ ಆಸ್ಪತ್ರೆ ಹುಲಸೂರಕ್ಕೆ ಕರೆದುಕೊಂಡು ಬಂದು ಸೇರಿಕ

ಮಾಡಿದ್ದು, ನಂತರ ವೈದ್ಯಾಧಿಕಾರಿಗಳ ಸಲಹೆ ಮೇರೆಗೆ ಹೆಚ್ಚಿನ ಚಿಕಿತ್ಸೆ ಕುರಿತು ಬಸವಕಲ್ಯಾಣ ಸರಕಾರಿ ಆಸ್ಪತ್ರೆಯಲ್ಲಿ ಸೇರಿಕ್ ಆಗಿದ್ದು ಇರುತ್ತದೆ. ನಾನು ಗಾಬರಿಗೊಂಡಿದ್ದು ಮತ್ತು ಚಿಕಿತ್ಸೆಯಲ್ಲಿ ಇರುವವದರಿಂದ ದೂರು ನೀಡಲು ತಡವಾಗಿರುತ್ತದೆ. ಆದ್ದರಿಂದ ದಿನಾಂಕ 12/08/2022 ರಂದು ರಾತ್ರಿ 1-00 ಗಂಟೆಗೆ ಅಕ್ರಮ ತಂದೆ ಶೇಖ ಅಹ್ಮದ ಸವಾಲಾಕೆ ಈತನು ಹಾಗು ಇನ್ನು 5 ಜನ ಅಪರಿಚಿತರು ಮಿರಕಲ್ ಶಿವಾರದ ಬೇಲೂರ-ಮಿರಕಲ್ ರಸ್ತೆಗೆ ಹೊಂದಿಕೊಂಡಿರುವ ನಮ್ಮ ಹೊಲದಲ್ಲಿನ ಶೆಡ್ಡಿನ ಹತ್ತಿರ ಬಂದು, ನನಗೆ ಹೊಡೆ ಬಡೆ ಮಾಡಿ ಬೆದರಿಸಿದ್ದಲ್ಲದೇ ಶೆಡ್ಡಿನಲ್ಲಿದ್ದ 35 ಕುರಿಗಳು ಅ.ಕಿ 175000/- ರೂಪಾಯಿಗಳು ಬೆಲೆ ಬಾಳುವ ಕುರಿಗಳು ದೋಚಿಕೊಂಡು ಹೋಗಿರುತ್ತಾರೆ. ಕಾರಣ ಅವರ ಮೇಲೆ ಕಾನೂನು ಕ್ರಮ ಜರುಗಿಸಲು ವಿನಂತಿ ಇರುತ್ತದೆ. ಅಂತಾ ಕೊಟ್ಟ ಹೇಳಿಕೆ ದೂರಿನ ಸಾರಾಂಶದ ಮೇರೆಗೆ ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಗಿದೆ.

**ಹಳ್ಳಿಖೇಡ (ಬಿ) ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ: 0078/2022 ಕಲಂ. 379 ಐಪಿಸಿ :-**

ದಿನಾಂಕ: 12/08/2022 ರಂದು 12:45 ಪಿರ್ಯಾದಿ ಠಾಣೆಗೆ ಹಾಜರಾಗಿ ದ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿ ಸಾರಂಶವೆನೆಂದರೆ, ನಾನು ಸಿದ್ದಪ್ಪಾ ತಂದೆ ಶಿವಕುಮಾರ ಮುದ್ದಗೊಂಡ ವಯ: 31 ವರ್ಷ: ಜಾ. ಎಸ.ಟಿ ಗೊಂಡ: ಉ. ಒಕ್ಕಲುತನ ಸಾ// ಹಿಪ್ಪರ್ಗಾ ಇದ್ದು ತಮಲ್ಲಿ ಬರೆದು ವಿನಂತಿಸಿಕೊಳ್ಳುವುದೆನೆಂದರೆ, ನಮ್ಮೂರ ನಮ್ಮ ಅಜ್ಜಕಲ್ಲಪ್ಪ ರವರ ಹೆಸರಿಗೆ ಇರುವ ಹೊಲ ಸರ್ವೆ ನಂ 60 ನೇದ್ದರಲ್ಲಿ ಇದ್ದ 4 ಎಕರ ಜಮೀನದಲ್ಲಿ ನೀರವಾರಿ ಕುರಿತು ಕೊಳವೆಬಾವಿ (ಬೋರವೇಲ) ಹಾಕಿದ್ದು ಅದಕ್ಕೆ 3 ಇಂಚು ನೀರು ಇದ್ದು ನಾನು ನಮ್ಮ ತಂದೆ ಶಿವಕುಮಾರ ರವರು ಒಕ್ಕಲುತನ ಕೆಲಸ ಮಾಡಿಕೊಂಡಿರುತ್ತೇವೆ. ನಾವು ದಿನಾಲು ಹೊಲಕ್ಕೆ ಹೋಗಿ ಹೊಲದಲ್ಲಿ ಕೆಲಸ ಮಾಡಿ ಸಂಜೆ ಮರಳಿ ಮನೆಗೆ ಬರುತ್ತೇವೆ. ಹೀಗಿರಲು ದಿನಾಂಕ 11/08/2022 ರಂದು ಮುಂಜಾನೆ 10:30 ಗಂಟೆಗೆ ನಾನು ನಮ್ಮ ತಂದೆ ಇಬ್ಬರು ಹೊಲಕ್ಕೆ ಹೋಗಿ ಹೊಲದಲ್ಲಿ ಇದ್ದ ಕಬ್ಬಿನ ಬೆಳೆಗೆ ನೀರು ಬಿಟ್ಟು ಸಂಜೆ 6:00 ಗಂಟೆಗೆ ಮನೆಗೆ ಬಂದಿರುತ್ತೇವೆ. ಇಂದು ದಿನಾಂಕ 12/08/2022 ರಂದು ಮುಂಜಾನೆ 9.00 ಗಂಟೆಗೆ ಎದ್ದಿನಂತೆ ನಾನು ಹೋಲಕ್ಕೆ ಹೋಗಿ ಕಬ್ಬಿಗೆ ನೀರು ಬಿಡವ ಕುರಿತು ಬೋರವೇಲ ಮೋಟಾರ ಚಾಲು ಮಾಡಿದಾಗ ಚಾಲು ಅಗಲಿಲ್ಲ ನಾನು ಏನಾಗಿದೆ ಅಂತಾ ನೋಡಲು ನಮ್ಮ ಬೋರವೇಲ್‌ಗೆ ಇದ್ದ ಕೇಬಲ ಅಂದಾಜು 20 ಫಿಟ್ ಕೇಬಲ ಇರಲಿಲ್ಲ ನಾನು ಇಲಿ, ಹೆಗ್ಗಣ ಏನಾದರೂ ಕಡಿದು ಬಿಟಾಗಿರಬೇಕು ಅಂತಾ ತಿಳಿದು ನಮ್ಮ ಹೊಲದಲ್ಲಿ ಎಲ್ಲಕಡೆ ಹುಡಕಾಡಿ ನೋಡಲು ಎಲ್ಲಿಯೂ ಕೇಬಲ ಪತ್ತೆಯಾಗಿರುವುದಿಲ್ಲ. ಅಲ್ಲೆ ನಮ್ಮ ಹೊಲದ ಹತ್ತಿರ ಹೊಲದಲ್ಲಿ ಕೆಲಸ ಮಾಡುತ್ತಿರುವ ನಮ್ಮೂರ ಉಮೇಶ ಬೋಲಾ ಇವರಿಗೆ ನಾನು ವಿಷಯ ತಿಳಿಸಿದಾಗ ಅವರು ಸಹ ಬಂದು ಎಲ್ಲಕಡೆ ಹುಡಕಾಡಿ ನೋಡಲು ಸಿಕ್ಕಿರುವುದಿಲ್ಲ. ನಮ್ಮ ಹೋಲದಲ್ಲಿ ಇದ್ದ ಬೋರವೇಲಗೆ ಅಳವಡಿಸಿದ ಬೋರವೇಲ ಕೇಬಲ ಅಂದಾಜು 20 ಪೀಟ್ ಅ.ಕಿ 2400/- ರೂಪಾಯಿ ನೇದ್ದು ದಿನಾಂಕ 11/08/2022 ರಂದು ಸಂಜೆ 6.00

ಗಂಟೆಯಿಂದ ದಿನಾಂಕ 12/08/2022 ರಂದು ಮುಂಜಾನೆ 0900 ಗಂಟೆಯ ಅವಧೀಯಲ್ಲಿ ಯಾರೋ ಅಪರಿಚಿತ ಕಳ್ಳರು ಕಳವು ಮಾಡಿಕೊಂಡು ಹೋಗಿರುತ್ತಾರೆ. ಆದೇ ರೀತಿ ನಮ್ಮ ಹೊಲದಲ್ಲಿ ಕಳವಾದ ದಿನವೇ ನಮ್ಮೂರ ಕಲ್ಲಪ್ಪಾ ತಂದೆ ತುಕಾರಾಮ ವಗ್ಗಿ ರವರ ಹೊಲದಲ್ಲಿ ಇದ್ದ ಬೋರವೇಲ ಕೇಬಲ ಅಂದಾಜು 20 ಫೀಟ್ ಅ.ಕಿ 2400/- ರೂಪಾಯಿ ನೇದ್ದು ಸಹ ಕಳವಾದ ಬಗ್ಗೆ ಕಲ್ಲಪ್ಪ ರವರು ನನಗೆ ತಿಳಿಸಿರುತ್ತಾರೆ. ಕಾರಣ ನಮ್ಮೂರ ನಮ್ಮ ಹೊಲ ಸರ್ವೆ ನಂ 60 ನೇದ್ದರಲ್ಲಿ ಇದ್ದ ಮತ್ತು ನಮ್ಮೂರ ಕಲ್ಲಪ್ಪ ವಗ್ಗಿ ರವರು ಹೊಲ ಸರ್ವೆ ನಂ 83 ದಲ್ಲಿರುವ ಬೋರವೇಲಗೆ ಅಳವಡಿಸಿದ ಬೋರವೇಲ ಕೇಬಲ ಅಂದಾಜು 40 ಫೀಟ್ ಅ.ಕಿ 4800/- ರೂಪಾಯಿ ನೇದ್ದು ದಿನಾಂಕ 11/08/2022 ರಂದು ಸಂಜೆ 6.00 ಗಂಟೆಯಿಂದ ದಿನಾಂಕ 12/08/2022 ರಂದು ಮುಂಜಾನೆ 0900 ಗಂಟೆಯ ಅವಧೀಯಲ್ಲಿ ಯಾರೋ ಅಪರಿಚಿತ ಕಳ್ಳರ ವಿರುದ್ದ ಕಾನೂನು ಕ್ರಮ ಜರುಗಿಸಲು ವಿನಂತಿ ಇರುತ್ತದೆ ಅಂತಾ ಇದ್ದ ದೂರಿನ ಸಾರಾಂಶದ ಮೇರಗೆ ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಯಿತು.

**ಹಳ್ಳಿಖೇಡ (ಬಿ) ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ : 0076/2022 ಕಲಂ. ಮಹಿಳಾ ಕಾಣೆ :-**

ದಿನಾಂಕ: 12/08/2022 ರಂದು 11:30 ಗಂಟೆಗೆ ಫಿರ್ಯಾದಿ ನಾಗರಾಜ ರವರು ಠಾಣೆಗೆ ಹಾಜರಾಗಿ ತಮ್ಮದೊಂದು ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿ ಸಾರಂಶವೆನೆಂದರೆ, ನಾನು ನಾಗರಾಜ ತಂದೆ ಮಲ್ಲೇಶ ವಗ್ಗೆನೂರ, ವಯ: 26 ವರ್ಷ ಜಾತಿ: ಕುರುಬರು, ಉ: ಕೂಲಿ, ಸಾ: ಹಳ್ಳಿಖೇಡ (ಬಿ). ನಾನು ನಿಂಬೂರ ಗ್ರಾಮದ ಬೀಮಶಾ ಹೊಸಳ್ಳಿ ರವರ ಮಗಳಾದ ನಾಗಮ್ಮ ಇವಳೊಂದಿಗೆ ಈಗ 8 ತಿಂಗಳ ಹಿಂದೆ ಮದುವೆ ಮಾಡಿಕೊಂಡಿದ್ದು ನನ್ನ ಹೆಂಡತಿಯಾದ ನಾಗಮ್ಮ ಇವಳು ಮನೆಕೆಲಸ ಮಾಡಿಕೊಂಡು ಇರುತ್ತಾಳೆ. ನಮ್ಮ ತಂದೆ ತಾಯಿಗೆ 1] ನಾನು ಮತ್ತು 2] ರೇಣುಕಾ ಅಂತಾ ಇಬ್ಬರು ಮಕ್ಕಳಿರುತ್ತೇವೆ. ನಮ್ಮ ತಾಯಿ ಕುರಿ ಮೇಯಿಸಿಕೊಂಡಿರುತ್ತಾರೆ. ಹೀಗಿರುವಾಗ ದಿನಾಂಕ 29/03/2022 ರಂದು ಮುಂಜಾನೆ 10:00 ಗಂಟೆ ಸುಮಾರಿಗೆ ನನ್ನ ತಾಯಿ ಕಲಾವತಿ ಇವರು ಕುರಿ ಮೇಯಿಸಲು ಹೋಗಿದ್ದು, ನಾನು ಕೂಡು ನನ್ನ ಕೆಲಸಕ್ಕೆ ಹೋಗಿರುತ್ತೇನೆ. ನಾನು ರಾತ್ರಿ 07:00 ಗಂಟೆಗೆ ಮನೆಗೆ ಬಂದಾಗ ನನ್ನ ತಂಗಿಗೆ ನನ್ನ ಹೆಂಡತಿ ಎಲ್ಲಿ ಅಂತಾ ಕೇಳಿದಾಗ ನನ್ನ ತಂಗಿ ತಿಳಿಸಿದ್ದೆನೆಂದರೆ, ನೀವು ಮುಂಜಾನೆ ಕೆಲಸಕ್ಕೆ ಹೋದಾಗ ನಾನು ಮತ್ತು ನಿನ್ನ ಹೆಂಡತಿ ನಾಗಮ್ಮ 11:00 ಗಂಟೆಗೆ ಸುಮಾರಿಗೆ ಮನೆಯಿಂದ ಹಳ್ಳಿಖೇಡ (ಬಿ) ಪಟ್ಟಣದ ಬ್ಯಾಂಕ್ ಪಾಸಬುಕ್ ಚೆಕ್ಕ ಮಾಡಲು ಬ್ಯಾಂಕಿಗೆ ಹೋಗುವಾಗ ಎಸ್‍ಬಿಐ ಬ್ಯಾಂಕಿನ ಸ್ವಲ್ಪ ದೂರು ಇರುವಾಗಲೇ ನಿನ್ನ ಹೆಂಡತಿ ನಾಗಮ್ಮ ನೀನು ಮನೆಗೆ ಹೋಗು ನಾನು ಬ್ಯಾಂಕಿನಲ್ಲಿ ಚೆಕ್ಕ ಮಾಡಿಕೊಂಡು ಮನೆಗೆ ಬರುತ್ತೇನೆ ಅಂತಾ ತಿಳಿಸಿರುತ್ತಾಳೆ ನಾನು ಮನೆಗೆ ಬಂದಿರುತ್ತೇನೆ. ಇಷ್ಟು ತಡವಾದರು ಅತ್ತೆಗೆ ನಾಗಮ್ಮ ಇವರು ಇನ್ನು ಮನೆಗೆ ಬಂದಿಲ್ಲಾ ಅಂತಾ ತಿಳಿಸಿರುತ್ತಾರೆ. ನಂತರ ನಾನು ಮತ್ತು ನನ್ನ ತಾಯಿ ಕಲಾವತಿ ಹಾಗೂ ನನ್ನ ತಂಗಿ ರೇಣುಕ ಎಲ್ಲರೂ ಸರಿ ಹಳ್ಳಿಖೇಡ (ಬಿ) ಪಟ್ಟಣದಲ್ಲಿ ಎಲ್ಲಾ ಕಡೆ ಹುಡುಗಾಡಿ ಮತ್ತು ನಿಂಬೂರು

ಗ್ರಾಮದ ಅವರು ತಂದೆ ತಾಯಿಗೆ ಪೋನ ಮೂಲಕ ವಿಚಾರಿಸಲು ನಿಂಬೂರಕ್ಕೆ ಗ್ರಾಮಕ್ಕೆ ಬಂದಿರುವುದಿಲ್ಲಾ ಅಂತಾ ತಿಳಿಸಿದರು. ನಾಗಮ್ಮ ಇವಳು ಎಲ್ಲಿಗೆ ಹೋಗಿರುತ್ತಾಳೆ ಅಂತ ಗೊತ್ತಾಗಿರುವುದಿಲ್ಲಾ. ಎಲ್ಲಾ ಕಡೆ ಹುಡುಕಾಡಿ ನಮ್ಮ ಸಂಬಂಧಿಕರ ಮನೆಗಳಿಗೆ ಫೋನ್ ಮಾಡಿ ವಿಚಾರಿಸಿ ತಿಳಿದುಕೊಳ್ಳಲು ಯಾವುದೇ ಮಾಹಿತಿ ಸಿಕ್ಕಿರುವು . ಕಾಣೆಯಾದ ನನ್ನ ಹೆಂಡತಿ ಹೆಸರು ನಾಗಮ್ಮ ಗಂಡ ನಾಗರಾಜ ವಗ್ಗೆನೂರ ವಯ: 22 ವರ್ಷ ಜಾತಿ:ಕುರುಬರು ಉ: ಕೂಲಿಕೆಲಸ ಸಾ//ಹಳ್ಳಿಖೇಡ (ಬಿ) ಇದ್ದು, ನನ್ನ ಹೆಂಡತಿ ಚಹರೆ ಪಟ್ಟಿ ಇಂತಿದೆ, ತೆಳ್ಳನೆಯ ಮುಖ. ಸಾಧಾರಣ ಮೈಕಟ್ಟು, ಗೋಧಿ ಮೈಬಣ್ಣ ತಲೆಯ ಮೇಲೆ ಕಪ್ಪು ಕೂದಲು, ನೇರವಾದ ಮೂಗು, ಮೈಮೇಲೆ ಚಾಕಲೇಟ ಬಣ್ಣದ ಚೂಡಿಧಾರ ಬಿಳಿ ಬಣ್ಣದ ವೇಲ್ ಧರಿಸಿದ್ದು, ಕನ್ನಡ ಮತ್ತು ಹಿಂದಿ ಭಾಷೆ ಮಾತನಾಡುತ್ತಾಳೆ. ಅಂದಾಜು ಎತ್ತರ 4 ಅಡಿ 2 ಇಂಚ ಇರುತ್ತಾಳೆ. ನನ್ನ ಹೆಂಡತಿ ನಾಗಮ್ಮ ವಗ್ಗೆನೂರ ಅವಳು ದಿನಾಂಕ: 29-03-2022 ರಂದು ಮುಂಜಾನೆ 11:00 ಗಂಟೆ ಸುಮಾರಿಗೆ ಮನೆಯಿಂದ ಬ್ಯಾಂಕಿಗೆ ಹೋಗಿ ಬರುತ್ತೇನೆ ಅಂತಾ ಮನೆಯಿಂದ ಹೋದವಳು ಮರಳಿ ಮನೆಗೆ ಬರದೆ ಕಾಣೆಯಾಗಿರುತ್ತಾಳೆ. ನಾವು ಎಲ್ಲಾ ಕಡೆಗೆ ಹುಡುಕಾಡಿ ವಿಚಾರಿಸಿ ತಿಳಿದುಕೊಳ್ಳಲು ಯಾವುದೆ ಮಾಹಿತಿ ಸಿಗದ ಕಾರಣ ಇಂದು ಠಾಣೆಗೆ ಬಂದು ದೂರು ನೀಡಲು ತಡವಾಗಿರುತ್ತದೆ. ಈ ಬಗ್ಗೆ ಕಾನೂನು ಕ್ರಮ ಜರುಗಿಸಲು ವಿನಂತಿ ಅಂತಾ ಇದ್ದ ಅರ್ಜಿ ಸಾರಂಶದ ಮೇರೆಗೆ ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಯಿತು.

**ಮಾರ್ಕೆಟ ಪೊಲೀಸ್ ಠಾಣೆ ಬೀದರ ಪ್ರಕರಣ ಸಂಖ್ಯೆ: 0051/2022 ಕಲಂ 78(3) ಕರ್ನಾಟಕ ಪೊಲೀಸ್ ಕಾಯ್ದೆ :-**

ದಿನಾಂಕ 12-08-2022 ರಂದು 1530 ಗಂಟೆಯ ಸುಮಾರಿಗೆ ಪಿಎಸ್ಐ ಮಾರ್ಕೆಟ ರವರು ಠಾಣೆಯಲ್ಲಿದ್ದಾಗ ಬಾತ್ಮಿ ಬಂದಿದೆನಂದರೆ, ಬೀದರ ನಗರದ ಕರ್ನಾಟಕ ಕಾಲೇಜ ಹತ್ತಿರ ಇರುವ ದೀನ ದಯಾಳ ನಗರದಲ್ಲಿ ಒಬ್ಬ ವ್ಯಕ್ತಿ ಸಾರ್ವಜನಿಕರಿಂದ ಹಣ ಪಡೆದು ಮಟಕಾ ಚೀಟಿ ಬರೆದು ಕೊಡುತ್ತಿದ್ದಾನೆಂದು ಬಾತ್ಮಿ ಮೇರೆಗೆ ಇಬ್ಬರು ಪಂಚರು ಹಾಗೂ ಸಿಬ್ಬಂದಿಯವರೊಂದಿಗೆ ಹೋಗಿ ನೋಡಲಾಗಿ, ಅಲ್ಲಿ ದೀನ ದಯಾಳ ನಗರದಲ್ಲಿ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ವ್ಯಕ್ತಿ ನಿಂತು ಒಂದು ರೂಪಾಯಿಗೆ 80/-ರೂ ಕೂಡಲಾಗುವದು ಇದು ಮುಂಬೈಯಿ ಮಟಕಾ ಎಂದು ಕೂಗುತ್ತಾ ಸಾರ್ವಜನಿಕರಿಂದ ಹಣ ಪಡೆದು ಮಟಕಾ ಚೀಟಿ ಬರೆದು ಕೊಡುವದನ್ನು ನೋಡಿ ಖಚಿತಪಪಡಿಸಿಕೊಂಡು ಪಂಚರ ಸಮಕ್ಷಮ ಸಿಬ್ಬಂಧಿ ಜೊತೆ 1630 ಗಂಟೆಗೆ ಅವನ ಮೇಲೆ ದಾಳಿ ಮಾಡಿ ಅವನಿಗೆ ಅಲ್ಲೆ ಹಿಡಿದುಕೊಂಡು ಅವನ ಹೆಸರು ಮತ್ತು ವಿಳಾಸ ವಿಚಾರಿಸಲಾಗಿ, ಅವನು ತನ್ನ ಹೆಸರು ಫಕೀರಪಾಶಾ ತಂದೆ ಶೇಕ ರಸೋಲ ಸಾಬ ವಯ 65 ವರ್ಷ ಜಾತಿ ಮುಸ್ಲಿಂ ಉ;ಕೂಲಿ ಕೆಲಸ ಸಾ:ಕಮಠಾಣಾ ಗ್ರಾಮ ತಾ:ಜಿ;ಬೀದರ ಅಂತಾ ತಿಳಿಸಿರುತ್ತಾನೆ. ನಂತರ ಅವನಿಗೆ ಚೆಕ್ ಮಾಡಲಾಗಿ, ಅವನ ಹತ್ತಿರ ಮಟಕಾ ಜೂಜಾಟಕ್ಕೆ ಸಂಬಂಧಿಸಿದ ನಗದು ಹಣ 1530/-ರೂ, ಮೂರು

ಮಟಕಾ ಚೀಟಿ ಹಾಗು ಒಂದು ಬಾಲಪೇನ ಅ.ಕಿ.10/-ರೂ ಸಿಕ್ಕಿದ್ದು ಇವುಗಳನ್ನು ಜಪ್ತಿ ಪಂಚನಾಮೆ ಮೂಲಕ ಜಪ್ತಿ ಮಾಡಿ ಆರೋಪಿಗೆ ತಾಬಕ್ಕೆ ತೆಗೆದುಕೊಂಡು ಪೊಲೀಸ್ ಠಾಣೆಗೆ ಬಂದು ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಯಿತು.

**ಮುಡಬಿ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ: 0059/2022 ಕಲಂ 78(3) ಕರ್ನಾಟಕ ಪೊಲೀಸ್ ಕಾಯ್ದೆ :-**

ದಿನಾಂಕ 12-08-2022 ರಂದು 1450 ಗಂಟೆಗೆ ಪಿಎಸ್ಐ ರವರು ಪೊಲೀಸ ಠಾಣೆಯಲ್ಲಿದ್ದಾಗ ಹಾರಕೂಡ ಕ್ರಾಸನ ಸಾರ್ವಜನಿಕ ರಸ್ತೆಯ ಮೇಲೆ ಒಬ್ಬ ವ್ಯಕ್ತಿ ಸಾರ್ವಜನೀಕರಿಗೆ 1 ರೂಪಾಯಿಗೆ 90 ರೂಪಾಯಿ ಕೊಡುವುದಾಗಿ ಹೇಳಿ ಮಟಕಾ ಬರೆದುಕೊಳ್ಳುತ್ತಿದ್ದಾನೆ ಅಂತ ಖಚಿತ ಬಾತ್ಮಿ ಬಂದ ಮೇರೆಗೆ ಸಿಬ್ಬಂದಿ ಮತ್ತು ಪಂಚರೊಂದಿಗೆ ಹೇಮರಡ್ಡಿ ಪೊಲೀಸ ಪಾಟೀಲ ರವರ ಹೊಲದ ಬಾವಿ ಹತ್ತೀರ ಜೀಪ ನಿಲ್ಲಿಸಿ ಜೀಪನಿಂದ ಎಲ್ಲರು ಕೆಳಗೆ ಇಳಿದು ಮುಂದೆ ನಡೆದುಕೊಂಡು ಹೋಗಿ ಹಾರಕೂಡ ಕ್ರಾಸ ಹತ್ತೀರದ ರೋಡ ಬದಿಯ ಒಂದೆರಡು ಸಾಲು ಮರದಡಿ ಮರೆಯಾಗಿ ನಿಂತು ನೋಡಲು ಕಲಬುರಗಿ – ಬಸವಕಲ್ಯಾಣ ರೋಡಿನ ಬದಿಗೆ ಹಾರಕೂಡ ಕ್ರಾಸನಲ್ಲಿ ರಸ್ತೆಯ ಮೇಲೆ ಒಬ್ಬ ವ್ಯಕ್ತಿ ರೋಡಿನಲ್ಲಿ ಹೋಗಿ ಬರುವ ಸಾರ್ವಜನಿಕರಿಗೆ ಮಟಕಾ ನಂಬರಗಳು ಬರೆಯಿಸಿರಿ 01 ರೂಪಯಿಗೆ 90 ರೂಪಾಯಿ ಪಡೆಯಿರಿ ಅಂತ ಕೂಗುತ್ತಾ ಬಂದವರಿಂದ ಹಣ ಪಡೆದು ಮಟಕಾ ನಂಬರಗಳನ್ನು ಬರೆದುಕೊಳ್ಳುತ್ತಿರವದನ್ನು ಕಂಡು ನಾನು ಸಿಬ್ಬಂಧಿಯವರೊಂದಿಗೆ ಪಂಚರ ಸಮಕ್ಷಮ 1530 ಗಂಟೆಗೆ ಸದರಿ ವ್ಯಕ್ತಿಯ ಮೇಲೆ ದಾಳಿ ಮಾಡಿದಾಗ ಮಟಕಾ ಬರೆಸುತ್ತಿದ್ದವರು ಅಲ್ಲಿಂದ ಓಡಿ ಹೋಗಿರುತ್ತಾರೆ ಮಟಕಾ ನಂಬರಗಳನ್ನು ಬರೆದುಕೊಳ್ಳುತ್ತಿರುವವನನ್ನು ಹಿಡಿದು ಅವನ ಹೆಸರು ಮತ್ತು ವಿಳಾಸ ವಿಚಾರಿಸಲು ಅವನು ತನ್ನ ಹೆಸರು ಅಬ್ದುಲ್ ಶಾ ತಂದೆ ಅಮೀನ ಶಾ ಫಕೀರ ವಯ: 40 ವರ್ಷ ಜಾ: ಮುಸ್ಲಿಂ ಉ: ಡ್ರೈವರ್ ಕೆಲಸ ಸಾಃ ಮುಡಬಿ ತಾಃ ಬಸವ ಕಲ್ಯಾಣ ಅಂತ ತಿಳಿಸಿದನು. ನಂತರ ನಾನು ಪಂಚರ ಸಮಕ್ಷಮ ಸದರಿ ವ್ಯಕ್ತಿಯ ಅಂಗ ಜಡ್ತಿ ಮಾಡಲು ಅವನ ಹತ್ತಿರ 1120/- ರೂಪಾಯಿ ನಗದು ಹಣ ಮತ್ತು ಒಂದು ಬಾಲ್ ಪೆನ್ನು ಹಾಗೂ ಎರಡು ಚೀಟಿಗಳು ಅದರ ಮೇಲೆ ಮಟಕಾ ನಂಬರ ಬರೆದವುಗಳನ್ನು ವಶಕ್ಕೆ ಪಡೆದುಕೊಂಡು ಅದರ ಬಗ್ಗೆ ವಿಚಾರಿಸಲಾಗಿ ನಾನು ಜನರಿಂದ ಹಣ ಪಡೆದು ಮಟಕಾ ನಂಬರಗಳು ಬರೆದುಕೊಂಡ ಚೀಟಿ ಹಾಗೂ ಮಟಕಾ ಬರೆದುಕೊಂಡಿದಕ್ಕೆ ಸಂಬಂಧಿಸಿದ ನಗದು ಹಣ ಇರುತ್ತವೆ ಮತ್ತು ಬರೆದುಕೊಂಡ ನಂಬರಗಳು ಮತ್ತು ಹಣವನ್ನು ಪರಮೇಶ್ವರ ಗಿಲ್ಕೆ ಸಾ: ಯಲದಗುಂಡಿ ಇವನಿಗೆ ನೀಡಿದಾಗ ಅವನು ನನಗೆ ಅದರಲ್ಲಿ ಕಮೀಷನ್ ನೀಡುತ್ತಾನೆ ಅಂತ ತಿಳಿಸಿದನು ನಂತರ ವಶಪಡಿಸಿಕೊಂಡ ಹಣ, ಪೆನ್ನು, ಮತ್ತು ಮಟಕಾ ನಂಬರ ಬರೆದುಕೊಂಡ 2 ಚೀಟಿಗಳನ್ನು ಪಂಚರ ಸಮಕ್ಷಮ ಜಪ್ತಿ ಮಾಡಿ ಜಪ್ತಿ ಪಂಚನಾಮೆ ಹಾಗು ಒಬ್ಬ ಆರೋಪಿತನಾದ ಅಬ್ದುಲ್ ಶಾ ತಂದೆ ಅಮೀನ ಶಾ ಫಕೀರ ವಯ: 40 ವರ್ಷ ಜಾ: ಮುಸ್ಲಿಂ ಉ: ಡ್ರೈವರ್ ಕೆಲಸ ಸಾಃ ಮುಡಬಿ ಈತನೊಂದಿಗೆ ಠಾಣೆಗೆ ಬಂದು ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಯಿತು.

**ಔರಾದ (ಬಿ) ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ : 117/2022 ಕಲಂ 78(3) ಕರ್ನಾಟಕ ಪೊಲೀಸ್ ಕಾಯ್ದೆ :-**

ದಿನಾಂಕ: 12/08/2022 ರಂದು 13:00 ಗಂಟೆಗೆ ಪಿ.ಎಸ್.ಐ ಔರಾದ ಬಿ ರವರು ಔರಾದ ಪಟ್ಟಣದ ಬಸ್ ನಿಲ್ದಾಣದ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಆರೋಪಿ ಪಂಡರಿ ತಂದೆ ಮಾರುತಿ ಬಿರಾದಾರ ವಯ: 62 ವರ್ಷ ಉ: ಒಕ್ಕಲುತನ ಜಾತಿ: ಹಟಕಾರ ಸಾ: ಹುಲ್ಯಾಳ ತಾ :ಔರಾದ ಬಿ ಈತನು ಕಾನೂನು ಬಾಹಿರ ಮಟಕಾ ಚಟುವಟಿಕೆಯಲ್ಲಿ ತೊಡಗಿದ್ದಾಗ ಪಂಚರ ಸಮಕ್ಷದಲ್ಲಿ ಸಿಬ್ಬಂದಿ ಜನರ ಸಹಾಯದಿಂದ ದಾಳಿ ಮಾಡಿ ಹಿಡಿದ್ದು ದಸ್ತಗಿರಿ ಮಾಡಿ ಮಟಕಾ ಜೂಜಾಟಕ್ಕೆ ಬಳಸಿದ 1 ಪೇನ್ನು, 4 ಮಟಕಾ ಚೀಟಿ, ಹಾಗೂ 360/-ರೂಪಾಯಿಗಳು ಜಪ್ತಿ ಮಾಡಿಕೊಂಡು ಠಾಣೆಗೆ ಬಂದು ಜ್ಞಾಪನ ಪತ್ರದ ಮೂಲಕ ಆರೋಪಿತರ ವಿರುದ್ಧ ಕಾನೂನು ಕ್ರಮ ಜರುಗಿಸಲು ಸೂಚಿಸಿದಾಗ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಕೊಂಡಿದ್ದು ಇರುತ್ತದೆ.

**ಬಸವಕಲ್ಯಾಣ ನಗರ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ: 117/2022 ಕಲಂ. 87 ಕರ್ನಾಟಕ ಪೊಲೀಸ್ ಕಾಯ್ದೆ :-**

ದಿನಾಂಕ: 12/08/2022ರಂದು 17:00 ಗಂಟೆಗೆ ಪಿ.ಎಸ್.ಐ (ಕಾ&ಸೂ) ಬಸವಕಲ್ಯಾಣ ನಗರ ಠಾಣೆಯಲ್ಲಿರುವಾಗ ಖಚಿತ ಬಾತ್ಮೀ ಬಂದಿದ್ದೇನೆಂದರೆ ಬಸವಕಲ್ಯಾಣ ಪಟ್ಟಣದ ಶಾಂತಿನಿಕೇತನ ಶಾಲೆಯ ಹಿಂದೆ ಸಾರ್ವಜನಿಕ ಸ್ಥಳದಲ್ಲಿ ಕೆಲವು ಜನರು ಗುಂಪಾಗಿ ಕುಳಿತುಕೊಂಡು ಹಣವನ್ನು ಪಣವಾಗಿ ಕಟ್ಟಿಕೊಂಡು ಯಾವುದೇ ಚಾತುರ್ಯ ಇಲ್ಲದ ಅಧೃಷ್ಟದ ಬಗ್ಗೆ ನಂಬಿಕೆ ಇಟ್ಟು ಹಣದ ಸೋಲು ಗೆಲುವಿನ ಇಸ್ಪಿಟ್ ಎಲೆಗಳ ಅಂದರ ಬಾಹರ್ ನಸಿಬಿನ ಜೂಜಾಟವನ್ನು ಆಡುತ್ತಿರುವ ಬಗ್ಗೆ ಬಾತ್ಮೀ ಮೇರೆಗೆ ಸಿಬ್ಬಂದಿ ಹಾಗೂ ಪಂಚರೊಂದಿಗೆ ಬಸವಕಲ್ಯಾಣ ಪಟ್ಟಣದ ಶಾಂತನೀಕೇತನ ಶಾಲೆಯ ಹತ್ತಿರ 50 ಅಡಿ ಅಂತರದಲ್ಲಿ ತಲುಪಿ ಮರೆಯಾಗಿ ನಿಂತು ನೋಡಲು ಭಾತ್ಮಿಯಂತೆ ಶಾಂತಿನೀಕೇತನ ಶಾಲೆಯ ಹಿಂದೆ ಸಾರ್ವಜನಿಕ ಸ್ಥಳದಲ್ಲಿ 07 ಜನರು ಗುಂಪಾಗಿ ಕುಳಿತು ಹಣವನ್ನು ಪಣವಾಗಿ ಕಟ್ಟಿಕೊಂಡು ಇಸ್ಪಿಟ್ ಎಲೆಗಳ ಅಂದರ ಬಾಹರ್ ನಸಿಬಿನ ಜೂಜಾಟವನ್ನು ಆಡುತ್ತಿರುವುದನ್ನು ನೋಡಿ ನಡೆದುಕೊಂಡು ಹೋಗಿ ಸಮಯ: 18:00 ಗಂಟೆಗೆ ಎಲ್ಲರು ಒಮ್ಮೆಲೆ ದಾಳಿ ಮಾಡಿ ಓಡಿ ಹೋಗದಂತೆ ತಾಕೀತ ಮಾಡಿ ಹಿಡಿದುಕೊಂಡು ಸಾಲಾಗಿ ನಿಲ್ಲಿಸಿ ಮೊದಲನೆಯವನಿಗೆ ಹೆಸರು ಮತ್ತು ವಿಳಾಸ ವಿಚಾರಿಸಲು ಅವನು ತನ್ನ ಹೆಸರು 1] ಮಹ್ಮದ ಮುಕಿಮೋದ್ದಿನ ತಂದೆ ಅಬ್ದುಲ ಗಫಾರ ಚಾಬುಕಸವಾರ ವಯ 30 ವಷ ಜಾತಿ ಮುಸ್ಲಿಂ ಉದ್ಯೋಗ ಕಿರಾಣಿ ಅಂಗಡಿ ಸಾ: ಆಜಂ ಕಾಲೋನಿ ಬಸವಕಲ್ಯಾಣ ತಿಳಿಸಿದಾಗ ಇವನ ಅಂಗ ಶೋಧನೆ ಮಾಡಲು ಅವನ ಅಧೀನದಿಂದ ನಗದು ಹಣ 750/-ರೂ ಸಿಕ್ಕಿರುತ್ತವೆ 2] ಸೈಯದ ಗೌಸೋದ್ದಿನ ತಂದೆ ಸೈಯದ ತಾಜೋದ್ದಿನ ಕೈಚಿ ವಯ 34 ವರ್ಷ ಜಾತಿ ಮುಸ್ಲಿಂ ಉದ್ಯೋಗ ಜಿ ಸಿ ಪಿ ಆಪರೇಟರ ಸಾ: ಹಿರೆಮಠ ಕಾಲೋನಿ ಬಸವಕಲ್ಯಾಣ ತಿಳಿಸಿದಾಗ ಇವನ ಅಂಗ ಶೋಧನೆ ಮಾಡಲು ಅವನ ಅಧೀನದಿಂದ ನಗದು ಹಣ 840/-ರೂ ಸಿಕ್ಕಿರುತ್ತವೆ 3] ಸೈಯದ ರಿಜವಾನ ತಂದೆ ಸೈಯದ ಇಕ್ರಾಮ ಅಕ್ಬರಪಾಶಾ ವಯ 28 ವರ್ಷ ಜಾತಿ ಮುಸ್ಲಿಂ

ಉದ್ಯೋಗ ಡ್ರೈವರ ಸಾ: ಹಿರೆಮಠ ಕಾಲೋನಿ ಬಸವಕಲ್ಯಾಣ ತಿಳಿಸಿದಾಗ ಇವನ ಅಂಗ ಶೋಧನೆ ಮಾಡಲು ಅವನ ಅಧೀನದಿಂದ ನಗದು ಹಣ 900/-ರೂ ಸಿಕ್ಕ್ಕರುತ್ತವೆ. 4] ಮಹ್ಮದ ಜಮೀಲ ತಂದೆ ಮಹ್ಮದ ರಾಜಾ ಚುಡಿಫೇರೊಜ ವಯ 32 ವರ್ಷ ಜಾತಿ ಮುಸ್ಲಿಂ ಉದ್ಯೋಗ ಡ್ರೈವರ ಸಾ: ಜೈ ಶಂಕರ ಕಾಲೋನಿ ಬಸವಕಲ್ಯಾಣ ತಿಳಿಸಿದಾಗ ಇವನ ಅಂಗ ಶೋಧನೆ ಮಾಡಲು ಅವನ ಅಧೀನದಿಂದ ನಗದು ಹಣ 750/-ರೂ ಸಿಕ್ಕ್ಕರುತ್ತವೆ 5] ಶೇಕ ಗೌಸ ತಂದೆ ಶೇಕ ಖಾಲೇದಮೀಯ್ಯಾ ವಯ 25 ವರ್ಷ ಜಾತಿ ಮುಸ್ಲಿಂ ಉದ್ಯೋಗ ಕೂಲಿ ಕೆಲಸ ಸಾ: ತಾಜ ಕಾಲೋನಿ ಬಸವಕಲ್ಯಾಣ ತಿಳಿಸಿದಾಗ ಇವನ ಅಂಗ ಶೋಧನೆ ಮಾಡಲು ಅವನ ಅಧೀನದಿಂದ ನಗದು ಹಣ 650/-ರೂ ಸಿಕ್ಕ್ಕರುತ್ತವೆ 6] ಶೇಕ ಆಮೇರ ತಂದೆ ಶೇಕ ಮೇಹಬೂಬ ವಯ 24 ವರ್ಷ ಜಾತಿ ಮುಸ್ಲಿಂ ಉದ್ಯೋಗ ಮೇಕ್ಯಾನಿಕ ಕೆಲಸ ಸಾ: ತಾಜ ಕಾಲೋನಿ ಬಸವಕಲ್ಯಾಣ ತಿಳಿಸಿದಾಗ ಇವನ ಅಂಗ ಶೋಧನೆ ಮಾಡಲು ಅವನ ಅಧೀನದಿಂದ ನಗದು ಹಣ 550/-ರೂ ಸಿಕ್ಕ್ಕರುತ್ತವೆ 7] ಎಂಡಿ ಅಖೀಲ ಬೇಗ ತಂದೆ ಎಂಡಿ ಖಲೀಲ ಬೇಗ ವಯ 23 ವರ್ಷ ಜಾತಿ ಮುಸ್ಲಿಂ ಉದ್ಯೋಗ ಇಲೇಕ್ಟ್ರೀಶನ ಕೆಲಸ ಸಾ: ತಾಜ ಕಾಲೋನಿ ಬಸವಕಲ್ಯಾಣ ತಿಳಿಸಿದಾಗ ಇವನ ಅಂಗ ಶೋಧನೆ ಮಾಡಲು ಅವನ ಅಧೀನದಿಂದ ನಗದು ಹಣ 600/-ರೂ ಸಿಕ್ಕ್ಕರುತ್ತವೆ ಹಾಗು ಎಲ್ಲರ ಮಧ್ಯದಲ್ಲಿ ಆಟದಲ್ಲಿ ನಗದು ಹಣ 15,900/-ರೂ ಮತ್ತು 52 ಇಸ್ಪಿಟ್ ಎಲೆಗಳು ಸಿಕ್ಕಿರುತ್ತವೆ. ಅಪರಾಧ ಸ್ಥಳದಲ್ಲಿ ಸಿಕ್ಕಿರುವ ಮತ್ತು ಆರೋಪಿತರ ಆಧೀನದಲ್ಲಿ ಸಿಕ್ಕಿರುವ ಒಟ್ಟು ನಗದು ಹಣ 20,940/-ರೂ ಮತ್ತು 52 ಇಸ್ಪಿಟ್ ಎಲೆಗಳು ಜಪ್ತಿ ಮಾಡಿ ಆರೋಪಿತರನ್ನು ವಶಕ್ಕೆ ಪಡೆದು ಠಾಣೆಗೆ ಬಂದು ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಯಿತು.

**ಭಾಲ್ಕಿ ಗ್ರಾಮೀಣ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ; 124/2022 ಕಲಂ. 87 ಕರ್ನಾಟಕ ಪೊಲೀಸ್ ಕಾಯ್ದೆ :-**

ದಿನಾಂಕ: 12/08/2022 ರಂದು 1415 ಗಂಟೆಗೆ ಪಿಎಸ್ಐ ರವರಿಗೆ ಭಾತ್ಮಿ ಬಂದಿದ್ದೇನೆಂದರೆ ಭಾಟಸಾಂಗವಿ ಶಿವರಾದ ರೋಡಿನ ಪಕ್ಕದಲ್ಲಿ ಇರುವ ನಾಲಾ ಬದಿಗೆ ಬಬಲಿ ಗಿಡದ ಕೆಳಗೆ ಸಾರ್ವಜನಿಕ ಸ್ಥಳದಲ್ಲಿ ಕೆಲವು ಜನರು ಇಸ್ಪಿಟ ಜೂಜಾಟ ಆಡುತ್ತಿದ್ದಾರೆಂದು ಖಚಿತ ಬಾತ್ಮಿ ಬಂದಿದ್ದು, ಕೂಡಲೇ ಪಂಚರು ಹಾಗೂ ಸಿಬ್ಬಂದಿಯವರೊಂದಿಗೆ ಭಾಟಸಾಂಗವಿ ಶಿವಾರದಲ್ಲಿ ಸಾಗುವ ಕಾರಂಜಾ ನದಿ ನಾಲೆಯ ಪಕ್ಕದಲ್ಲಿನ ರಸ್ತೆ ಬದಿಯಲ್ಲಿ ಸಾರ್ವಜನಿಕ ಸ್ಥಳದಲ್ಲಿ ಬಬಲಿ ಮರದ ಕೆಳಗೆ 06 ಜನರು ದುಂಡಾಗಿ ಕುಳಿತು ಅಂದರ ಬಹಾರ ಅನ್ನುವ ನಸೀಬಿನ ಇಸ್ಪಿಟ ಜೂಜಾಟ ಆಡುತ್ತಿರುವುದನ್ನು ಖಚಿತ ಪಡಿಸಿಕೊಂಡು ಅವರ ಮೇಲೆ ಪಂಚರ ಸಮಕ್ಷಮ ಸಿಬ್ಬಂದಿಯವರ ಸಹಾಯದೊಂದಿಗೆ ಒಮ್ಮೇಲೆ 1520 ಗಂಟೆಗೆ ದಾಳಿ ಮಾಡಿ ಹಿಡಿದುಕೊಂಡು ಅವರಿಗೆ ಓಡಿಹೋಗದಂತೆ ಎಚ್ಚರಿಸಿ ಒಬ್ಬರಿಗೆ ಅವರ ಹೆಸರು ಮತ್ತು ವಿಳಾಸ ಕೇಳಿದಾಗ ಅವರ ತಮ್ಮ ಹೆಸರು 1) ಚಂದ್ರಕಾಂತ ತಂದೆ

ಅಣ್ಣಾರಾವ ಬಿರಾದಾರ 42 ವರ್ಷ ಜಾ: ಮರಾಠಾ ಉ: ಒಕ್ಕಲುತನ ಸಾ: ಭಾಟಸಾಂಗವಿ 2) ಸುನೀಲ ತಂದೆ ಗೋವಿಂದ ಮೇತ್ರೆ 23 ವರ್ಷ ಜಾ:ಎಸ.ಟಿ ಗೊಂಡ ಉ: ಒಕ್ಕಲುತನ ಸಾ: ಭಾಟಸಾಮಗವಿ, 3) ಬಾಲಾಜಿ ತಂದೆ ಮಾಣಿಕರಾವ ಭಾಲ್ಕೆ 34 ವರ್ಷ ಜಾ; ಲಿಂಗಾಯತ ಉ: ಒಕ್ಕಲುತನ ಸಾ: ಭಾಟಸಾಂಗವಿ 4) ಶ್ರೀಮಂತ ತಂದೆ ಮಾಧವರಾವ ಸೂರ್ಯವಂಶಿ 50 ವರ್ಷ ಜಾ: ಮರಾಠಾ ಉ: ಕೂಲಿ ಕೆಲಸ ಸಾ:ಭಾಟಸಾಂಗವಿ 5) ಮೋಹನ ತಂದೆ ಮಾಧವರಾವ ವಾಘಮೊರೆ 65 ವರ್ಷ ಜಾ: ಎಸ.ಸಿ ಹೊಲೆಯ ಉ: ಕೂಲಿ ಕೆಲಸ ಸಾ: ಭಾಟಸಾಂಗವಿ ಹಾಗೂ 6) ರಾಮ ತಂದೆ ಯಶವಂತರಾವ ಬಿರಾದಾರ 60 ವರ್ಷ ಜಾ: ಮರಾಠಾ ಉ: ಒಕ್ಕಲುತನ ಸಾ; ಭಾಟಸಾಂಗವಿ ಅಂತ ಹೇಳಿದ್ದು, 5030/- ರೂ ಇದ್ದವು. ಇವೆಲ್ಲವನ್ನು ಪಂಚರ ಸಮಕ್ಷಮ ಜಪ್ತಿ ಪಂಚನಾಮೆ ಮೂಲಕ ಜಪ್ತಿಮಾಡಿಕೊಂಡು ಆರೋಪಿಗಳನ್ನು ವಶಕ್ಕೆ ಪಡೆದು ಠಾಣೆಗೆ ಬಂದು ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಯಿತು.

**ಚಿಂತಾಕಿ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ: 0044/2022 ಕಲಂ. 87 ಕರ್ನಾಟಕ ಪೊಲೀಸ್ ಕಾಯ್ದೆ :-**

ದಿನಾಂಕ 12/08/2022 ರಂದು 16;30 ಗಂಟೆಗೆ ಪಿಎಸ್ಐ ರವರಿಗೆ ಖಚಿತ ಭಾತ್ಮಿ ಮೇರೆಗೆ ಸಿಬ್ಬಂದಿ ಹಾಗೂ ಪಂಚರೊಂದಿಗೆ ಚಿಕ್ಲಿ(ಜೆ) ಕೆರೆಯ ಹತ್ತಿರ ಇರುವ ಸಾರ್ವಜನಿಕ ರಸ್ತೆಯ ಪಕ್ಕದಲ್ಲಿ ಮರೆಯಾಗಿ ನೋಡಲು ಸಾರ್ವಜನಿಕ ಖುಲ್ಲಾ ಸ್ಥಳದಲ್ಲಿ ಕೇಲವು ಜನರು ಗೊಲಾಗಿ ನೇಲದ ಮೇಲೆ ಕುಳಿತು ಅಂದರ ಬಾಹರ ಎಂಬ ನಸುಬಿನ ಜೂಜಾಟ ಆಡುತ್ತಿದ್ದನ್ನು ಖಚಿತಪಡಿಸಿಕೊಂಡು ಅವರ ಮೇಲೆ ಒಮ್ಮೆಲೆ ಪಂಚರೊಂದಿಗೆ 18;30 ಗಂಟೆಗೆ ದಾಳಿ ಮಾಡಿ ಹಿಡಿದು ಅವರಲ್ಲಿ ಎಲ್ಲರಿಗೆ ಹೆಸರು ವಿಳಾಸ ವಿಚಾರಿಸಲು ಅದರಲ್ಲಿ 1.ನಾಮದೇವ ತಂದೆ ಲಿಂಬಾಜಿ ರಾಠೋಡ ವಯ;356 ವರ್ಷ ಜಾ; ಲಮಾಣಿ ಉ;ಕೂ;ಲಿಕೆಲಸ ಸಾ; ಗಾಂಧಿನಗರ ತಾಂಡಾ ಇವನ ಹತ್ತಿರ 170/- ರೂ 2. ನಂದು ತಂದೆ ಭಿಕ್ಕು ಚೌವ್ಹಾನ ವಯ; 45 ವರ್ಷ ಜಾ; ಲಮಾಣಿ ಉ; ಕೂಲಿಕೆಲಸ ಸಾ; ಮೆಡಪಳ್ಳಿ ತಾಂಡಾ ಇವನ ಹತ್ತಿರ 430/- ರೂ3. ರವಿಕೂಮಾರ ತಂದೆ ಅರ್ಜುನ ಸಂತಪೂರೆ ವಯ; 37 ವರ್ಷ ಜಾ; ಎಸ್.ಸಿ ಹೋಲೆಯಾ ಉ; ಡ್ರೈವರ್ ಸಾ; ಚಿಕ್ಲಿ(ಜೆ) ಇವನ ಹತ್ತಿರ 5300/- ರೂ 4. ಚಂದ್ರಕಾಂತ ತಂದೆ ವಿಷ್ಣುಕಾಂತ ಬಚ್ಚಾ ವಯ;32 ವರ್ಷ ಜಾ; ಕೋಮಟಿ ಉ; ಕಿರಾಣಿ ಅಂಗಡಿ ಸಾ; ಜಂಬಗಿ ಇವನ ಹತ್ತಿರ 14600/- ರೂ5. ಶಿವಾಜಿ ತಂದೆ ಗೋಪಾ ಚೌವ್ಹಾಣ ವಯ;50 ವರ್ಷ ಜಾ; ಲಮಾಣಿ ಉ; ಕೂಲಿಕೆಲಸ ಸಾ; ಗಾಂಧಿನಗರ ತಾಂಡ ಇವನ ಹತ್ತಿರ 3400/- ರೂ ಇನ್ನೊಬ್ಬ ಆರೋಪಿತನನು ಓಡಿ ಹೋಗಿದ್ದು ಅವನ ಕುರಿತು ವಿಚಾರಿಸಲು ಆತನ ಹೆಸರು ಸಂತೋಷರೆಡ್ಡಿ ತಂದೆ ಮಲ್ಲರೆಡ್ಡಿ ವಯ;32 ವರ್ಷ ಜಾ; ರೆಡ್ಡಿ ಉ;ಒಕ್ಕುಲತನ ಸಾ; ಚಿಕ್ಲಿ(ಜೆ) ಅಂತ ಆರೋಪಿತರು ತಿಳಿಸಿರುತ್ತಾರೆ. ಹಾಗು ಎಲ್ಲರ ಮಧ್ಯದಲ್ಲಿ 52 ಇಸ್ಪೀಟ್ ಎಲೆಗಳು ಹಾಗು ನಗದು ಹಣ 1400

ರೂಗಳನ್ನು ಹಿಗೆ ಒಟ್ಟು 25900/- ರೂ ಜಪ್ತಿ ಮಾಡಿಕೊಂಡು ಆರೋಪಿತರನ್ನು ವಶಕ್ಕೆ ತೆಗೆದುಕೊಂಡು ಠಾಣೆಗೆ ಬಂದು ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಯಿತು.

**ಮೆಹೆಕರ್ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ :- 60/2022 ಕಲಂ. 32, 34 ಕರ್ನಾಟಕ ಅಬಕಾರಿ ಕಾಯ್ದೆ :-**

ದಿನಾಂಕ: 12-08-2022 ರಂದು 0900 ಗಂಟೆಗೆ ಪಿಎಸ್ಐ ರವರು ಠಾಣೆಯಲ್ಲಿದ್ದಾಗ, ಗುಂಜರಗಾ ಗ್ರಾಮದ ಅಳವಾಯಿ ರೋಡಿಗೆ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ವ್ಯಕ್ತಿ ಅನಧಿಕೃತವಾಗಿ ಒಂದು ಚೀಲದಲ್ಲಿ ಸರಾಯಿ ಇಟ್ಟುಕೊಂಡು ಮಾರಾಟ ಮಾಡುತ್ತಿದ್ದಾನೆ ಅಂತ ಖಚಿತ ಬಾತ್ಮಿ ಬಂದಿರುತ್ತದೆ. ಸಿಬ್ಬಂದಿ ಹಾಗೂ ಪಂಚರೊಂದಿಗೆ ಗುಂಜರಗಾ ಗ್ರಾಮದ ಅಳವಾಯಿ ರೋಡಿಗೆ ಸ್ವಲ್ಪ ದೂರದಲ್ಲಿ ನಿಂತು ನೋಡಲು ಅಲ್ಲಿ ಮುಂದೆ ಅಳವಾಯಿ ರೋಡಿಗೆ ರೋಡಿನ ಬದಿಯಲ್ಲಿ ತನ್ನ ಮುಂದೆ ಒಂದು ಚೀಲ ಇಟ್ಟುಕೊಂಡು ಸರಾಯಿ ಮಾರಾಟ ಮಾಡುತ್ತ ನಿಂತಿದ್ದ ಒಬ್ಬ ವ್ಯಕ್ತಿ ಪೊಲೀಸ್ ಜೀಪ ನೋಡಿ ಚೀಲವನ್ನು ಅಲ್ಲಿ ಬಿಟ್ಟು ಓಡಲು ಹತ್ತಿದ್ದಾಗ ಪೊಲೀಸ ಜೀಪಿನಲ್ಲಿದ್ದ ಸಿಬ್ಬಂದಿಯಾದ ಗೌಸೋದ್ದೀನ ಸಿಪಿಸಿ 1255 ರವರು ಅವನಿಗೆ ಬೆನ್ನು ಹತ್ತಿ ಹಿಡಿದು ಕರೆದುಕೊಂಡು ಬಂದಿರುತ್ತಾರೆ. ಸದರಿಯವನಿಗೆ ಅವನ ಹೆಸರು ಮತ್ತು ವಿಳಾಸ ವಿಚಾರಿಸಲು ಸದರಿಯವನು ತನ್ನ ಹೆಸರು ರಾಹೂಲ ತಂದೆ ದತ್ತಾ ಬಂಡೆ ವಯ 19 ವರ್ಷ ಜಾ:ಕೋಳಿ ಉ: ಕೂಲಿ ಸಾ: ತೂಗಾಂವ(ಹೆಚ್) ಅಂತಾ ತಿಳಿಸಿರುತ್ತಾನೆ. ಮತ್ತೆ ಸದರಿಯವನಿಗೆ ಸಾರಾಯಿ ಮಾರಾಟ ಮಾಡಲು ಯಾವುದಾದರೂ ಅಧೀಕೃತ ಪ್ರಾಧಿಕಾರದಿಂದ ಅಥವಾ ಸರಕಾರದಿಂದ ಅನುಮತಿ ಪಡೆದುಕೊಂಡಿದ್ದೀಯ ಅಂತಾ ವಿಚಾರಿಸಲು ಸದರಿಯವನು ನಾನು ಯಾವುದೇ ಪ್ರಾಧಿಕಾರ ಅಥವಾ ಸರಕಾರದಿಂದ ಅನುಮತಿ ಪಡೆಯದೇ ಅನಧೀಕೃತವಾಗಿ ಸರಾಯಿ ಮಾರಾಟ ಮಾಡುತ್ತಿದ್ದೇನೆ ಅಂತಾ ತಿಳಿಸಿರುತ್ತಾರೆ ನಂತರ ಸದರಿಯವನು ಬಿಟ್ಟು ಓಡಿ ಹೋಗಿದ್ದ ಚೀಲವನ್ನು ಪಂಚರ ಸಮಕ್ಷಮ ಪರಿಶೀಲಿಸಿ ನೋಡಲು ಅದರಲ್ಲಿ 1) 90 ಎಮ್.ಎಲ್. ಸಾಮಥ್ರ್ಯವುಳ್ಳ ಒಟ್ಟು 35 ಯು.ಎಸ. ವಿಸ್ಕಿ ಪ್ಲಾಸ್ಟಿಕ ಬಾಟಲಗಳು ಇದ್ದು ಪ್ರತಿಯೊಂದರೆ ಬೆಲೆ 35.13 ರೂ ಅಂತಾ ಇದ್ದು ಎಲ್ಲಾ ಬಾಟಲಗಳ ಅ: ಕಿ: 1897/- ರೂ ನೇದು ಇರುತ್ತದೆ ಎಲ್ಲವನ್ನು ಜಪ್ತಿ ಮಾಡಿ ಆರೋಪಿಯನ್ನು ವಸಕ್ಕೆ ಪಡೆದು ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಯಿತು.